ವಿಜಯಪುರ | ಸಂಪುಟ 02 | ಸಂಚಿಕೆ 47 | ಪುಟ 4 | ₹ 3.00
https://udayarashminews.com
udayarashmi 7026028778

# ಉದಯ ರಶ್ಮಿ

Udayarashmi Kannada Daily
ಜನಪರ-ಜೀವಪರ
ಕನ್ನಡ ದಿನಪತ್ರಿಕೆ
ಸಂಪಾದಕ : ಇಂದುಶೇಖರ ಮಣೂರ
Editor: Indushekhar Manur
editor.udayarashmi@gmail.com RNI NO: KARKAN/2023/86203 ಮಂಗಳವಾರ, ಏಪ್ರಿಲ್ 09, 2024




### ಮಾಜಿ ಸಚಿವ ಸಲ್ಮಾನ್ ಖುರ್ಷಿದ್, ಸಂಸದರಾದ ಮುಕುಲ್ ವಾಸ್ನಿಕ್, ಪವನ್ ಖೇರಾ&ಗುರುದೀಪ್ ಸಪ್ಪಲ್ ನಿಯೋಗದಿಂದ ದೂರು

# ಮೋದಿ ವಿರುದ್ಧ ಚುನಾವಣಾ ಆಯೋಗಕ್ಕೆ ಕಾಂಗ್ರೆಸ್ ದೂರು

ದೆಹಲಿ: "ಪಕ್ಷದ ಪ್ರಣಾಳಿಕೆಯು ಮುಸ್ಲಿಂ ಲೀಗ್‌ನ ಸಿದ್ಧಾಂತವನ್ನು ಪ್ರತಿಬಿಂಬಿಸುತ್ತದೆ ಮತ್ತು ಪ್ರತಿ ಪುಟವು ಭಾರತವನ್ನು ತುಂಡು ತುಂಡಾಗಿಸುವ ಅಂಶವನ್ನು ಹೊಂದಿದೆ" ಎಂಬ ಪ್ರಧಾನಿ ನರೇಂದ್ರ ಮೋದಿಯವರ ಹೇಳಿಕೆಯ ವಿರುದ್ಧ ಕಾಂಗ್ರೆಸ್ ಚುನಾವಣಾ ಆಯೋಗಕ್ಕೆ ದೂರು ನೀಡಿದೆ.

ಮಾಜಿ ಕೇಂದ್ರ ಸಚಿವ ಸಲ್ಮಾನ್ ಖುರ್ಷಿದ್, ರಾಜ್ಯಸಭಾ ಸಂಸದರಾದ ಮುಕುಲ್ ವಾಸ್ನಿಕ್, ಪವನ್ ಖೇರಾ ಮತ್ತು ಗುರುದೀಪ್ ಸಪ್ಪಲ್ ಅವರ ನಿಯೋಗವು ಚುನಾವಣಾ ಆಯೋಗದ ಕೇಂದ್ರ ಕಚೇರಿಗೆ ಭೇಟಿ ನೀಡಿ ದೂರು ಸಲ್ಲಿಸಿದೆ.

ಚುನಾವಣಾ ನೀತಿ ಸಂಹಿತೆಯನ್ನು ಉಲ್ಲಂಘಿಸಿ ಬಿಜೆಪಿಯು ಚುನಾವಣಾ ಪ್ರಚಾರದಲ್ಲಿ ಸಶಸ್ತ್ರ ಪಡೆಗಳನ್ನು ಬಳಸಿಕೊಳ್ಳುತ್ತಿದೆ ಎಂದು ಕಾಂಗ್ರೆಸ್ ತನ್ನ ದೂರಿನಲ್ಲಿ ಆರೋಪಿಸಿದೆ.

ಕೇಂದ್ರ ಸಚಿವ ಮತ್ತು ಬಿಜೆಪಿಯ ತಿರುವನಂತಪುರಂ ಅಭ್ಯರ್ಥಿ ರಾಜೀವ್ ಚಂದ್ರಶೇಖರ್ ಅವರು 'ಚುನಾವಣಾ ಅಫಿಡವಿಟ್‌ನಲ್ಲಿ ತಮ್ಮ ಆರ್ಥಿಕ ಸ್ಥಿತಿಗೆ ಸಂಬಂಧಿಸಿದಂತೆ ಸುಳ್ಳು ಮಾಹಿತಿ ನೀಡಿದ್ದಾರೆ' ಎಂದು ಕಾಂಗ್ರೆಸ್ ಮತ್ತೊಂದು ದೂರು ದಾಖಲಿಸಿದೆ.



'ವಿಕಸಿತ ಭಾರತ @ 2047: ಯುವ ಜನರ ಧ್ವನಿ ಅಭಿಯಾನ' ಅಡಿಯಲ್ಲಿ ದೆಹಲಿ ವಿಶ್ವವಿದ್ಯಾನಿಲಯದ ವಿವಿಧ ಕಾಲೇಜುಗಳಲ್ಲಿ ಅಳವಡಿಸಲಾದ ಪ್ರಧಾನಿಯವರ ಬೃಹತ್ ಗಾತ್ರದ ಹೋರ್ಡಿಂಗ್‌ಗಳು ಮತ್ತು ಬ್ಯಾನರ್‌ಗಳ ವಿಷಯವನ್ನೂ ಕಾಂಗ್ರೆಸ್ ದೂರಿನಲ್ಲಿ ಉಲ್ಲೇಖಿಸಿದೆ. ಇದು ಮಾದರಿ ನೀತಿ ಸಂಹಿತೆಯ ಉಲ್ಲಂಘನೆ ಎಂದಿದೆ.


ದೂರ ದರ್ಶನದಲ್ಲಿ 'ದಿ ಕೇರಳ ಸ್ಟೋರಿ' ಸಿನಿಮಾ ಪ್ರಸಾರಕ್ಕೆ ಮುಂದಾಗಿರುವುದರ ವಿರುದ್ಧವೂ ಕಾಂಗ್ರೆಸ್ ದೂರು ನೀಡಿದ್ದು, "ಇದು ಧಾರ್ಮಿಕ ಸಮುದಾಯವನ್ನು ನಿಂದಿಸುವ ಮತ್ತು ದೇಶದಲ್ಲಿ ಲವ್ ಜಿಹಾದ್ ಎಂಬ ಕಾಲ್ಪನಿಕ ವಿಷಯವನ್ನು ದೊಡ್ಡದಾಗಿ ಬಿಂಬಿಸುತ್ತದೆ ಎಂದಿದೆ. ಇಂತಹ ಚಲನಚಿತ್ರಗಳನ್ನು ಪ್ರಸಾರ ಮಾಡುವುದರಿಂದ ಮತದಾರರನ್ನು ಧ್ರುವೀಕರಿಸಬಹುದು, ಧಾರ್ಮಿಕ ಗುರುತಿನ ರೀತಿಯಲ್ಲಿ ಕೋಮು ವೈಷಮ್ಯವನ್ನು ಉಂಟು ಮಾಡಬಹುದು. ಇದು ಸಂಪೂರ್ಣವಾಗಿ ಮುಕ್ತ ಮತ್ತು ನ್ಯಾಯಯುತ ಚುನಾವಣೆಗಳ ಮನೋಭಾವ ಮತ್ತು ಮಾದರಿ ನೀತಿ ಸಂಹಿತೆಗೆ ವಿರುದ್ಧವಾಗಿದೆ ಎಂದು ಕಾಂಗ್ರೆಸ್ ಹೇಳಿದೆ.

ತ್ರಿಪುರಾದ ಪಶ್ಚಿಮ ಲೋಕಸಭಾ ಕ್ಷೇತ್ರದ ಚುನಾವಣಾಧಿಕಾರಿ ವಿರುದ್ಧವೂ ಕಾಂಗ್ರೆಸ್ ದೂರು ದಾಖಲಿಸಿದೆ. ಚುನಾವಣಾಧಿಕಾರಿ ಚುನಾವನಾ ಬ್ಯಾನರ್ ಮತ್ತು ಪೋಸ್ಟರ್‌ಗಳನ್ನು ಪ್ರಕಟಿಸುವ ಮಾರಾಟಗಾರರ ನಡುವೆ ವಾಣಿಜ್ಯ ಒಪ್ಪಂದ ಮಾಡಿಕೊಳ್ಳಲು ಅಭ್ಯರ್ಥಿಯ ಮೇಲೆ ಒತ್ತಡ ಹೇರುತ್ತಿದ್ದಾರೆ ಎಂದು ಆರೋಪಿಸಿದೆ.

### ರಾಜ ನುಡಿ

ಹುಟ್ಟು ಮತ್ತು ಸಾವುಗಳು ಪರ್ಯಾಯವೇ ಇಲ್ಲದ ಪರಮಾತ್ಮನ ಪರಮ ವಿಸ್ಮಯಗಳು. ಇವು ಬೇವು–ಬೆಲ್ಲದಂತೆ, ಬದುಕಿನ ಸಿಹಿ ಹಾಗೂ ಕಹಿಗಳನ್ನು ಸಂಕೇತಿಸುತ್ತವೆ. ಹೀಗಾಗಿ ಎರಡನ್ನೂ ಒಟ್ಟಾಗಿ ಸ್ವೀಕರಿಸಿ ಪರ್ಯಾಯವಿಲ್ಲದ ಪರಮಾತ್ಮನ ವಿಸ್ಮಯಗಳನ್ನು ಮೀರೋಣ.

–ಡಾ. ರಾಜಶೇಖರ ನಾಗೂರ



### ವಚನ ಚಿಂತನ 350

*ಅನು ನೀನೆಂಬುದು ತಾನಿಲ್ಲ,*
*ತಾನರಿದ ಬಳಿಕ ಏನೂ ಇಲ್ಲ ಇಲ್ಲ.*
*ಇಲ್ಲದ ಇಲ್ಲವೆ ಎಲ್ಲಿಂದ ಬಪ್ಪುದೊ?*
*ಅನುವರಿದು, ತನುವ ಮರೆದ ಭಾವರಹಿತ ಗುಹೇಶ್ವರ.*

ಮಾನವನನಿಗೆ ನಾಗರಿಕತೆಯ ಪೂರ್ವದ ಕಾಲದಿಂದಲೂ ಬಿಡಿಸದ ಒಗಟಾಗಿರುವ "ನಾನು ಯಾರು?" ಎಂಬುದರ ಬಗ್ಗೆ ಈ ವಚನದಲ್ಲಿ ಅಲ್ಲಮಪ್ರಭುಗಳು ಸ್ಪಷ್ಟೀಕರಣ ನೀಡಿದ್ದಾರೆ. ವಚನದ ಪ್ರಾರಂಭದ ಸಾಲಿನಲ್ಲಿ ನಾನು ನೀನೆಂಬ ಈ ಉಭಯ ಪ್ರಶ್ನೆಗಳನ್ನು ಹುಟ್ಟುಹಾಕಿ ಚಿಂತನೆಗೆ ಹಚ್ಚಿ ಅಲ್ಲಿ ತಾನು ಇಲ್ಲದಂತೆ ಇರುವ ಆ ಶಕ್ತಿ ಯಾವುದು? ಅದು ಇರುವ ಸ್ಥಿತಿಯಲ್ಲಿ ಅದನ್ನು ಅರಿಯ ಹೋದ ಅಲ್ಲಮರಿಗೆ ಅದು ಅಲ್ಲಿ ಇಲ್ಲದಾಗಿದೆ(ತಾನಿಲ್ಲ), ನಾನು ಇರುವುದು ಸತ್ಯವೆಂದಾದರೆ ನನ್ನ ಇರುವಿಕೆಗೆ ಕಾರಣ ಕರ್ತನಾದ ನೀನು ಸಹ ಇರುವೆ ಎಂಬ ನಂಬಿಕೆ ಮೇಲೆ ನಿನ್ನನ್ನು ಅರಿಯ ಹೋದರೆ ಅಲ್ಲಿ ಏನೂ ಇಲ್ಲ ಇಲ್ಲ ಎನ್ನುವ ಸ್ಥಿತಿಯನ್ನು ಅಲ್ಲಮರು ತಲುಪಿದ್ದಾರೆ (ತಾನರಿದ ಬಳಿಕ ಏನೂ ಇಲ್ಲ ಇಲ್ಲ.) ನಿನ್ನ ಅರಿಯುವುದು ಎಂದರೆ ನನ್ನ ನರಿಯುವುದು ಎಂಬ ಸತ್ಯವನ್ನು ತಿಳಿದ ಮೇಲೆ. ನನ್ನಲ್ಲಿಯ ನಿನ್ನ ಹುಡುಕಾಟದಲ್ಲಿ ಇಲ್ಲದ ಈ ಇಲ್ಲದ ಸ್ಥಿತಿಯನ್ನು ನಿರ್ವಾಣ ಮಾಡಿದ ಶಕ್ತಿ ಯಾವುದು? ಅದು ಎಲ್ಲಿಂದ ಪ್ರೇರಣೆ ಗೈಯುತ್ತಿರುವುದು ಎಂಬುದನ್ನು ಅಲ್ಲಮರು "ಇಲ್ಲದ ಇಲ್ಲವೆ ಎಲ್ಲಿಂದ ಬಪ್ಪುದೊ? " ಎಂದು ಚಿಂತಿಸಿದ್ದಾರೆ. ಈ ಎಲ್ಲಾ ಆಂತರಿಕ ತುಮುಲಕ್ಕೆ ಸಮಾಧಾನವನ್ನು ತಾವೇ ಕಂಡುಕೊಳ್ಳುತ್ತಾ ನಾನು ದೇಹ ಎಂಬ ಭಾವದಿಂದ ನನ್ನೊಳಗೆ ದೇವನನ್ನು ಅರಸುವ ತಪ್ಪು ವಿಧಾನಗಳಿಂದ ದೇವರನ್ನು ಕಾಣಲು ಸಾಧ್ಯವಿಲ್ಲ, ಅಂಗಭಾವ ಅಳಿದಾಗ ಮಾತ್ರ ಲಿಂಗದ ಅರಿವು ಮೂಡಲು ಸಾಧ್ಯ. ದೇವರೆಂಬುದು ಭಾವನೆಗಳಿಗೆ ಬಂಧಿಯಾಗುವ ವಸ್ತುವಲ್ಲ ಅದು ಭಾವಾತೀತ. ನಾನು ಎಂಬುದು ಲಿಂಗಪ್ರಜ್ಞೆ, ಅಂಗವೆಂಬುದು ನಾನು ಎಂಬುದಕ್ಕೆ ನೀಡಿದ ತಾತ್ಕಾಲಿಕ ಆಶ್ರಯ ತಾಣವಾಗಿದೆ ವಿನಃ ಅಂಗವೇ ನಾನಲ್ಲ. ಲಿಂಗ ಅಂಗದಿಂದ ಭಿನ್ನವಲ್ಲ. ಅಂಗದಿಂದ ಲಿಂಗ ನೋಡುವಲ್ಲಿ ಅಂಗದ ಕಣ್ಣಿಗೆ ಏನೂ ಕಾಣದ ಪರಿಣಾಮ 'ಇಲ್ಲ ಇಲ್ಲ' ಎಂಬ ಭಾವ ಒಡಮೂಡಿದ.

-ರುದ್ರೇಶ ಕಿತ್ತೂರ, ಮುದ್ದೇಬಿಹಾಳ

## ಮಠಾಧೀಶರ ರಾಜಕೀಯ ಖಂಡನೀಯ :ಕಲ್ಯಾಣಶೆಟ್ಟಿ

**ಉದಯರಶ್ಮಿ ನ್ಯೂಸ್**

ಬಸವನಬಾಗೇವಾಡಿ: ರಾಜ್ಯದಲ್ಲಿ ಕೆಲವು ಮಠಾಧೀಶರು ಲೋಕಸಭಾ ಚುನಾವಣೆಯಲ್ಲಿ ಲಿಂಗಾಯತರ ಹೆಸ–ರಿನಲ್ಲಿ ರಾಜಕೀಯ ಮಾಡುತ್ತಿರುವುದು ಸರಿಯಾದ ಕ್ರಮವಲ್ಲ. ರಾಜ್ಯದ ಕೆಲವೇ ಮಠಾಧೀಶರು ಲಿಂಗಾಯತರ ಪರವಾಗಿ ಸಾಮಾಜಿಕ ಶೈಕ್ಷಣಿಕ ಹಾಗೂ ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡುತ್ತಾ ಬರುತ್ತಿರುವುದನ್ನು ನೋಡಿದ್ದೇವೆ. ಇತ್ತೀಚೆಗೆ ಮಠಾಧೀಶರು ಸಕ್ರಿಯವಾಗಿ ರಾಜಕೀಯ ಮಾಡುತ್ತಿರುವುದು ಖಂಡನೀಯವಾಗಿದೆ ಎಂದು ಬಸವನಬಾಗೇವಾಡಿ ತಾಲೂಕಿನ ಜಾಗತಿಕ ಲಿಂಗಾಯತ ಮಹಾಸಭಾ ಕಾರ್ಯಾಧ್ಯಕ್ಷ ವಿವೇಕಾನಂದ ಕಲ್ಯಾಣಶೆಟ್ಟಿ ಹೇಳಿದ್ದಾರೆ.



ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ರಾಜಕೀಯ ಪಕ್ಷಗಳ ಟಿಕೆಟ್ ಅನ್ನು ಕೊಡಿಸುವುದು ಸೇರಿದಂತೆ ಹಲವಾರು ವಿಷಯದಲ್ಲಿ ಮಠಾಧೀಶರರು ಮೂಗು ತೂರಿಸುವುದು ಸರಿಯಾದ ಕ್ರಮವಲ್ಲ. ಇದರಲ್ಲಿ ಕೆಲವು ಮಠಾಧೀಶರು ಸ್ವತಂತ್ರ ಲಿಂಗಾಯತ ಧರ್ಮವನ್ನು ವಿರೋಧಿಸುತ್ತಿದ್ದಾರೆ. ಕೆಲವು ಲಿಂಗಾಯತ ಧರ್ಮದ ಹೋರಾಟದಿಂದ ಹಿಂದೆ ಸರಿದಿದ್ದಾರೆ ಎನ್ನುವುದು ರಾಜ್ಯದ ಜನತೆ ಗೊತ್ತಿದೆ. ಪ್ರಜಾಪ್ರಭುತ್ವದಲ್ಲಿ ಮತದಾನ ಮಾಡುವುದು ಮತದಾರರ ಹಕ್ಕು ಆಗಿರುತ್ತದೆ. ಲಿಂಗಾಯತ ಧರ್ಮಕ್ಕೆ ಯಾವುದೇ ಕೊಡುಗೆ ನೀಡದ ಮಠಾಧೀಶರು ಲಿಂಗಾಯತ ಧರ್ಮದ ಹೆಸರಿನಲ್ಲಿ ರಾಜಕೀಯ ಮಾಡುವುದು ಸರಿಯಲ್ಲ. ಚುನಾವಣೆಯಲ್ಲಿ ಸ್ಪರ್ಧಿಸುವ ಹಕ್ಕು ಪ್ರತಿಯೊಬ್ಬರಿಗೂ ಇದೆ. ದಿಂಗಾಲೇಶ್ವರ ಸ್ವಾಮಿಗಳು ಚುನಾವಣೆಗೆ ನಿಲ್ಲಲು ಸ್ವತಂತ್ರರಾಗಿದ್ದಾರೆ. ಆದ–'ರೆ ಲಿಂಗಾಯತ ಧರ್ಮದ ಬಗ್ಗೆ ಒಂದು ಪೈಸೆ ಕೆಲಸ ಮಾಡದ ಅವರು ತಮ್ಮ ಆತ್ಮ ವಿಮರ್ಶೆ ಮಾಡಿಕೊಳ್ಳಬೇಕು. ಹಿಂದೊಮ್ಮೆ ಪ್ರಭಾವಿಯಾಗಿದ್ದ ಮಾತೆ ಮಹಾದೇವಿಯರು ಇದೇ ಕ್ಷೇತ್ರದಲ್ಲಿ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ ಠೇವಣಿಯನ್ನು ಕಳೆದುಕೊಂಡ ಉದಾಹರಣೆ ಇದೆ ಎನ್ನುವುದು ದಿಂಗಾಲೇಶ್ವರ ಸ್ವಾಮಿಗಳಿಗೆ ಗೊತ್ತಿರಬೇಕು. ದಯವಿಟ್ಟು ಲಿಂಗಾಯತರನ್ನು ತಪ್ಪು ದಾರಿಗೆ ಎಳೆಯುವ ಕೆಲಸ ಮಾಡಬಾರದು. ಲಿಂಗಾಯತರು ಜಾಗೃತರು ಇದ್ದಾರೆ ಎನ್ನುವ ಸಾಮಾನ್ಯ ಜ್ಞಾನ ಸ್ವಾಮಿಗಳಿಗೆ ಇರಬೇಕೆಂದು ತಿಳಿಸಿದ್ದಾರೆ.


## ಮೋದಿ ಮತ್ತೊಮ್ಮೆ ಪ್ರಧಾನಿಯಾಗಲು ನನ್ನ ಗೆಲ್ಲಿಸಿ :ಜಿಗಜಿಣಗಿ

**ಉದಯರಶ್ಮಿ ನ್ಯೂಸ್**

ಬಬಲೇಶ್ವರ: ವಿಕಸಿತ ಭಾರತದ ಸಂಕಲ್ಪ ತೊಟ್ಟಿರುವ ಸಮರ್ಥ ನಾಯಕ ನರೇಂದ್ರ ಮೋದಿಯವರು ಮೂರನೇ ಬಾರಿ ದೇಶದ ಪ್ರಧಾನಿಯಾಗುವುದನ್ನು ತಪ್ಪಿಸಲು ಯಾವ ಶಕ್ತಿಯಿಂದಲೂ ಸಾಧ್ಯವಿಲ್ಲ. ಅವರು 3 ನೇ ಬಾರಿ ಪ್ರಧಾನಿಯಾಗಲು ಸಂಸತ್ ನಲ್ಲಿ ನಾನು ಅವರ ಪರವಾಗಿ ಮತ್ತೆ ಕೈ ಎತ್ತಬೇಕೆಂಬುದು ನನ್ನ ಕೊನೆಯ ಆಸೆಯಾಗಿದೆ ಎಂದು ಸಂಸದ ಹಾಗೂ ವಿಜಯಪುರ ಲೋಕಸಭಾ ಕ್ಷೇತ್ರದ ಎನ್.ಡಿ.ಎ ಮೈತ್ರಿಕೂಟದ ಅಭ್ಯರ್ಥಿ ರಮೇಶ ಜಿಗಜಿಣಗಿ ಅಭಿಲಾಷೆ ವ್ಯಕ್ತಪಡಿಸಿದರು.

ಲೋಕಸಭಾ ಚುನಾವಣಾ ಪ್ರಚಾರಾರ್ಥ ಬಬಲೇಶ್ವರ ಮತಕ್ಷೇತ್ರದ ಮಮದಾಪುರ ಬಿಜೆಪಿ ಮಹಾಶಕ್ತಿ ಕೇಂದ್ರದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕರ್ತರ ಸಭೆಯಲ್ಲಿ ಅವರು ಮಾತನಾಡಿದರು.

ದೇಶದ ರಕ್ಷಣೆ ಮತ್ತು ಉಳಿವಿಗಾಗಿ ಈ ಹಿಂದೆ ಎರಡು ಬಾರಿ ಮೋದಿಯವರ ಪರವಾಗಿ ಕೈ ಎತ್ತಲು ವಿಜಯಪುರ ಜನ ನನಗೆ ಅವಕಾಶ ಮಾಡಿಕೊಟ್ಟಿದ್ದೀರಿ. ಇನ್ಮುಂದೆ ನಾನು ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ. ಆದರೆ ಮೋದಿಯವರನ್ನು ಮೂರನೇ ಸಲ ಪ್ರಧಾನಿ ಮಾಡಲು ನಾನು ಈ ಬಾರಿಯೂ ಕೈ ಎತ್ತಬೇಕು ಎಂಬುದು ನನ್ನ ಕೊನೆಯ ಆಸೆ. ಹಾಗಾಗಿ ಈ ಬಾರಿಯೂ ವಿಜಯಪುರ ಜನತೆ ನನಗೆ ಆಶೀರ್ವದಿಸಬೇಕೆಂಬುದು ನನ್ನ ಪ್ರಾರ್ಥನೆ. ಪ್ರಧಾನಿಯಾಗಲು ಉತ್ಕೃಷ್ಟ ವ್ಯಕ್ತಿತ್ವ ಹೊಂದಿರುವ ಸಮರ್ಥ ನಾಯಕನಾಗಿರಬೇಕು. ಕಾಂಗ್ರೆಸ್ ನವರು ಪಪ್ಪು ಎಂದು ಕರೆಯುವ ಹುಡುಗನನ್ನು ದೇಶದ ಪ್ರಧಾನಿ ಮಾಡಲು ಹೊರಟ್ಟಿದ್ದಾರೆ. ಇಂತಹ ವ್ಯಕ್ತಿಯನ್ನು ಜನ ಒಪ್ಪಲು ಸಾಧ್ಯವೇ ಎಂದು ಜಿಗಜಿಣಗಿ ಪ್ರಶ್ನಿಸಿದರು.



ಈ ಹಿಂದೆ ನಾನು ಚಿಕ್ಕೋಡಿ ಲೋಕಸಭಾ ಕ್ಷೇತ್ರದಲ್ಲಿ ಬೇರೆ ಬೇರೆ ಪಕ್ಷಗಳಿಂದ ಚುನಾವಣೆಯಲ್ಲಿ ಸ್ಪರ್ಧಿಸಿದರೂ ಜನ ನನ್ನನ್ನು ಲಕ್ಷಾಂತರ ಮತಗಳ ಅಂತರದಿಂದ ಗೆಲ್ಲಿಸಿದರು. ರಾಮಕೃಷ್ಣ ಹೆಗಡೆ ಅವರ ನಿಧನ ನಂತರ ಬಹಳಷ್ಟು ಜನ ನನಗೆ ಕಾಂಗ್ರೆಸ್ ಪಕ್ಷ ಸೇರಿಕೊಳ್ಳುವಂತೆ ಒತಡ ಹಾಕಿದರು. ಕಾಂಗ್ರೆಸ್ ಪಕ್ಷ ಸಂವಿಧಾನ ಶಿಲ್ಪಿ ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರ ಅಂತ್ಯ ಸಂಸ್ಕಾರಕ್ಕೆ ಕೇವಲ 6 ಅಡಿ ಜಾಗ ನೀಡಲಿಲ್ಲ. ಅಂತಹ ಕಾಂಗ್ರೆಸ್ ಪಕ್ಷ ನಾನು ಸೇರುವುದಿಲ್ಲ ಎಂದು ತಿರಸ್ಕರಿಸಿದೆ. ಆಗಿನ ಬಿಜೆಪಿ ರಾಜ್ಯಾಧ್ಯಕ್ಷರಾಗಿದ್ದ ಯಡಿಯೂರಪ್ಪ ಅವರಿಗೆ ಒತ್ತಡ ಹೇರಿ ನಾನು ಬಿಜೆಪಿ ಸೇರಿಕೊಂಡೆ. ಅಂದಿನಿಂದ ಇಂದಿನವರೆಗೂ ಬಿಜೆಪಿಯಲ್ಲಿ ನಿಷ್ಠನಾಗಿದ್ದೇನೆ ಎಂದರು.

ವಿಜಯಪುರ ಲೋಕಸಭಾ ಕ್ಷೇತ್ರದಲ್ಲಿ 2004 ರಿಂದ ವಿಜಯಪುರ ಜನ ಸತತ ಮೂರು ಬಾರಿ ನನ್ನನ್ನು ಆರಿಸಿ ತಂದಿದ್ದೀರಿ. ಹಾಗೆಂದು ನಾನು ಸುಮ್ಮನೇ ಕೂಡದೇ ವಿಜಯಪುರ ಮತಕ್ಷೇತ್ರದ ಅಭಿವೃದ್ಧಿಗೆ ಜಿಲ್ಲೆಯಲ್ಲಿ ಈ ಹಿಂದಿನ ಕಾಂಗ್ರೆಸ್ ಸಂಸದರಾರೂ ತರಲಾರದಷ್ಟು ಹೆಚ್ಚು ಅನುದಾನ ಕೇಂದ್ರದಿಂದ ತಂದು ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದೇನೆ. ನಮ್ಮ ಹಾಗೂ ದೇಶದ ರಕ್ಷಣೆಗಾಗಿ ಮೋದಿ ಮತ್ತೊಮ್ಮೆ ಬರಲೇಬೇಕು ಎಂದು ಇಡಿ ದೇಶವೇ ಕೂಗಿ ಹೇಳುತ್ತಿದೆ ಎಂದರು.

ಬಿಜೆಪಿ ಮುಖಂಡ ವಿಜುಗೌಡ ಪಾಟೀಲ್ ಮಾತನಾಡಿ, ಅಭಿವೃದ್ಧಿಗೆ ಮತ್ತೊಂದು ಹೆಸರು ಬಿಜೆಪಿ. ಅಧಿಕಾರವಿರಲಿ, ಬಿಡಲಿ ಪಕ್ಷದ ಸಾಮಾನ್ಯ ಕಾರ್ಯರ್ತನಾಗಿ, ಬಬಲೇಶ್ವರ ಮತಕ್ಷೇತ್ರದ ಮನೆಯ ಮಗನಾಗಿ ಕೆಲಸ ಮಾಡಿಕೊಂಡು ಬಂದಿದ್ದೇನೆ. ಮೋದಿಯವರ ಕೈ ಬಲಪಡಿಸಲು ಬಬಲೇಶ್ವರ ಮತಕ್ಷೇತ್ರ ಹಾಗೂ ಜಿಲ್ಲೆಯ ಜನತೆ ಈ ಬಾರಿಯೂ ರಮೇಶ ಜಿಗಜಿಣಗಿ ಅವರಿಗೆ ಮತ್ತೊಮ್ಮೆ ಆಶೀರ್ವದಿಸಬೇಕೆಂದು ಕೇಳಿಕೊಳ್ಳುತ್ತೇನೆ ಎಂದರು. ಬಿಜೆಪಿ ಜಿಲ್ಲಾಧ್ಯಕ್ಷ ಆರ್.ಎಸ್.ಪಾಟೀಲ್ ಕೂಚಬಾಳ, ಜಿಲ್ಲಾ ಬಿಜೆಪಿ ರೈತ ಮೋರ್ಚಾ ಅಧ್ಯಕ್ಷ ಗುರುಲಿಂಗಪ್ಪ ಅಂಗಡಿ ಮಾತನಾಡಿದರು.

ಈ ವೇಳೆ ಜಿಲ್ಲಾ ಚುನಾವಣಾ ಸಂಚಾಲಕ ಅರುಣ ಶಹಾಪುರ, ಮಂಡಲ ಅಧ್ಯಕ್ಷ ಸಂತೋಷ ಕುರದಡ್ಡಿ, ಕ್ಷೇತ್ರ ಸಂಚಾಲಕ ಸಂಜಯ ಬಿ. ಪಾಟೀಲ ಕನಮಡಿ, ಕ್ಷೇತ್ರ ಪ್ರಭಾರಿ ಕೃಷ್ಣಾ ಗುನ್ನಾಳಕರ, ಜಿಲ್ಲಾ ಉಪಾಧ್ಯಕ್ಷ ಉಮೇಶ ಕೋಳಕುರ, ವಿವೇಕ ಡಬ್ಬಿ, ಮಂಡಲ ಪ್ರಧಾನ ಕಾರ್ಯದರ್ಶಿ ಈರಣ್ಣ ರಾವೂರ, ಸಾಬು ಮಾಶ್ಯಾಳ ಮಂಡಲ ಕಾರ್ಯಕಾರಿಣಿ ಸದಸ್ಯರು, ಮೋರ್ಚಾ ಕಾರ್ಯಕಾರಿಣಿ ಸದಸ್ಯರು, ಮಮದಾಪುರ ಮಹಾಶಕ್ತಿ ಪದಾಧಿಕಾರಿಗಳು, ಕಾರ್ಯಕರ್ತರು ಹಾಗೂ ಗುರುಹಿರಿಯರು ಉಪಸ್ಥಿತರಿದ್ದರು.

### ಎಕ್ಸಲೆಂಟ್ ಕಾಲೇಜ್ ಆಫ್ ನರ್ಸಿಂಗ ಕಾಲೇಜಿನ ವಿದ್ಯಾರ್ಥಿಗಳ ದೀಪದಾನ ಕಾರ್ಯಕ್ರಮ

## ನರ್ಸ್ ವೃತ್ತಿಯ ಪಾವಿತ್ರ್ಯ ಹೆಚ್ಚಿಸಿ: ಬಸವರಾಜ ಕೌಲಗಿ

**ಉದಯರಶ್ಮಿ ನ್ಯೂಸ್**

ವಿಜಯಪುರ: ಅತ್ಯಂತ ಪವಿತ್ರವಾದ ವೃತ್ತಿಯಾಗಿರುವ ನರ್ಸ್ ವೃತ್ತಿಯಲ್ಲಿ ತಾವು ಪ್ರಾಮಾಣಿಕವಾಗಿ ಕೆಲಸಮಾಡಿ ನೀವೆಲ್ಲರೂ ಆ ವೃತ್ತಿಯ ಘನತೆ ಗೌರವವನ್ನು ಹೆಚ್ಚಿಸಬೇಕು. ಆ ಮೂಲಕ ರೋಗಿಗಳ ಮುಖದಲ್ಲಿ ನಗು ಮೂಡಿಸುವ ಪ್ರಾಮಾಣಿಕ ಪ್ರಯತ್ನ ಮಾಡಿ ಎಕ್ಸಲೆಂಟ್ ಕಾಲೇಜ್ ಆಫ್ ನರ್ಸಿಂಗ್ ಕಾಲೇಜಿನ ಕೀರ್ತಿಯನ್ನು ಹೆಚ್ಚಿಸಬೇಕೆಂದು ಎಕ್ಸಲೆಂಟ್ ಸಮೂಹ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕ ಅಧ್ಯಕ್ಷ ಬಸವರಾಜ ಕೌಲಗಿ ಹೇಳಿದರು.

ಅವರು ನಗರದಲ್ಲಿ ನಡೆದ ಮಾತೋಶ್ರೀ ಗೌರಮ್ಮ ಅಪ್ಪಾಸಾಹೇಬ ಬಬಲೇಶ್ವರ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಎಕ್ಸಲೆಂಟ್ ಕಾಲೇಜ್ ಆಫ್ ನರ್ಸಿಂಗ ಕಾಲೇಜಿನ ಪ್ರಸಕ್ತ ಶೈಕ್ಷಣಿಕ ವರ್ಷದ ವಿದ್ಯಾರ್ಥಿಗಳ ದೀಪದಾನ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಕಾರ್ಯಕ್ರಮವನ್ನು ಉದ್ಘಾಟಿಸಿದ ನಂದಿ ಸಕ್ಕರೆ ಕಾರ್ಖಾನೆಯ ಅಧ್ಯಕ್ಷ ಕುಮಾರ ದೇಸಾಯಿ ಅವರು ಮಾತನಾಡಿ " ಈ ಕಾಲೇಜಿನ ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗಳ ಜೊತೆಗೆ ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳಲ್ಲಿ ನಿಮ್ಮ ಉತ್ತಮ ಸಾಧನೆ ಹಾಗೂ ತಾವೆಲ್ಲರೂ ಪಡೆದಿರುವ ಬಹುಮಾನಗಳನ್ನು ನೋಡಿದರೆ ನನಗೆ ಸಂತೋಷವೆನಿಸುತ್ತದೆ,




ನರ್ಸಿಂಗ್ ಕೋರ್ಸ್ ಮುಗಿದ ನಂತರ ನೀವು ಪ್ರಾಮಾಣಿಕ ದಾದಿಯರಾಗಿ ಜನರ ಆರೋಗ್ಯವನ್ನು ರಕ್ಷಿಸಿ ಎಂದು ಹೇಳಿದರು " ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಚಾಣಕ್ಯ ಕರಿಯರ್ ಅಕಾಡೆಮಿಯ ಸಂಸ್ಥಾಪಕ ಅಧ್ಯಕ್ಷ ಎನ್ ಎಂ ಬಿರಾದಾರ ಗುರುಗಳು ಮಾತನಾಡಿ " ನರ್ಸಿಂಗ್ ಶಿಕ್ಷಣ ಮತ್ತು ನರ್ಸಿಂಗ್ ವೃತ್ತಿಯ ಶ್ರೇಷ್ಠತೆಯನ್ನು ಜಗತ್ತಿಗೆ ಸಾರಿದ ನೈಟಿಂಗ್ ಹೇಲ್ಸ್ ನಮ್ಮೆಲ್ಲರಿಗೂ ಪ್ರೇರಣೆಯಾಗಿದ್ದು, ನೀವು ಯಾವ ವೃತ್ತಿಯನ್ನು ಆಯ್ಕೆ ಮಾಡಿಕೊಂಡಿರುವಿರೋ ಆ ವೃತ್ತಿಯನ್ನು ಪ್ರೀತಿಸಿ, ಪ್ರೀತಿಯಿಂದ ಸೇವೆ ಮಾಡಿದರೆ ಅದಕ್ಕಿಂತ ಸಾರ್ಥಕವಾದ ಕೆಲಸ ಜೀವನದಲ್ಲಿ ಮತ್ತೊಂದಿರಲಾರದು ಎಂದು ಹೇಳಿದರು" ಇನ್ನೋರ್ವ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಅಮ್ಮನ ಮಡಿಲು ಚಾರಿಟೇಬಲ್ ಟ್ರಸ್ಟ್ ನ ಅಧ್ಯಕ್ಷ ಸಂಗಮೇಶ ಬಬಲೇಶ್ವರ ಮಾತನಾಡಿ " ನೀವು ನಿಮ್ಮ ವೃತ್ತಿಯಲ್ಲಿ ನೈಪುಣ್ಯತೆಯನ್ನು ಗಳಿಸಿಕೊಂಡು, ರೋಗಿಗಳ ಸೇವೆಯೇ ಭಗವಂತನ ಸೇವೆ ಎಂದು ಪ್ರಾಮಾಣಿಕವಾಗಿ ದುಡಿದರೆ, ರೋಗಿಗಳ ಹೃದಯದಲ್ಲಿ ದೇವರ ಸ್ಥಾನವನ್ನು ಪಡೆಯುತ್ತೀರಿ, ನಮ್ಮ ಭಾರತ ದೇಶದ ಸಂಸ್ಕೃತಿ ನಿಂತಿ–ರುವುದೇ ಪ್ರೀತಿ ಮತ್ತು ತ್ಯಾಗ ಎನ್ನುವ ಮೌಲ್ಯಗಳ ಮೇಲೆ ಎನ್ನುವುದನ್ನು ತಾವೆಲ್ಲರೂ ಅರ್ಥ ಮಾಡಿಕೊಳ್ಳಬೇಕು ಎಂದರು". ಸಂಸ್ಥೆಯ ಕಾರ್ಯದರ್ಶಿ ಪ್ರದೀಪ ಲಿಂಗದಳ್ಳಿ ಪ್ರಾಚಾರ್ಯರಾದ ಶ್ವೇತಾ ಬಿರಾದಾರ. ಪ್ರೊಫೆಸರ್ ಕಲ್ಯಾಣಿ ಸರ್,ಅಖಿಲಾ ಬಿರಾದಾರ, ಅಂಜುಮ್ ಹತ್ತರಕೀಹಾಳ್, ಆಕಾಶ ಮಳನೂರ, ರಾಜು ತಿಡಗುಂದಿ ಹಾಗೂ ವಿದ್ಯಾರ್ಥಿಗಳು ಪಾಲಕರು ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಪ್ರಾಚಾರ್ಯ ಶ್ವೇತಾ ಬಿರಾದಾರ ಅವರು ವಿದ್ಯಾರ್ಥಿಗಳಿಗೆ ಪ್ರಮಾಣ ವಚನ ಬೋಧಿಸಿದರು. ಬಸವರಾಜ ಬಾಗೇವಾಡಿ ಸ್ವಾಗತಿಸಿ, ನಿರೂಪಿಸಿ, ವಂದಿಸಿದರು.



ಉದಯರಶ್ಮಿ ದಿನಪತ್ರಿಕೆ

## ಕಾವ್ಯರಶ್ಮಿ

– ರಶ್ಮಿಪ್ರಸಾದ್ (ರಾಶಿ)
("ನಮ್ಮ ಕಥಾ ಅರಮನೆ" ಬರಹಗಾರರು)



# ಯುಗಾದಿ ಭಾವಗಾನ.!

ನೋವಿರಲಿ, ಬೇವಿರಲಿ ನಿತ್ಯವೂ
ಮೊಗದಿ ನಗೆಯ ಪ್ರಣತೆಯಿರಲಿ
ಬೇವು ಬೆಲ್ಲದಾ ಬದುಕಿನಲಿ ಸದಾ
ಚಿರ ಬಾಳಸ್ಫೂರ್ತಿಯ ಒರತೆಯಿರಲಿ.!

ಕಳೆಯುತ ಸಕಲ ಲೋಕದ ತಗಾದಿ
ನವೋತ್ಸಾಹ ತುಂಬಲಿ ಯುಗಾದಿ
ಹೊಸ ಕನಸು ಭರವಸೆಗಳ ಹರ್ಷದಿ
ನವಬೆಳಕಿಟ್ಟು ಬೆಳಗಲಿ ಮನೆ=ಮನದಿ.!




ವರ್ಷದ ಮೊದಮೊದಲ ಹಬ್ಬವಿದು
ಸಂತಸ ಸಂಭ್ರಮಗಳ ದಿಬ್ಬಣವಿದು
ಆರಂಭ ನವ-ಸಂವತ್ಸರದ ಪಯಣ
ಮಾರ್ದನಿಸಿದೆ ಹೊಸನಲಿವಿನ ರಿಂಗಣ.!

ನಳನಳಿಸಲಿ ಸದಾಶಯಗಳ ತೋರಣ
ಘಮಘಮಿಸಲಿ ಸಿಹಿಸಂಕಲ್ಪ ಹೂರಣ
ವಸಂತನೊಲವಿನ ಕೋಗಿಲೆ ಸವಿಗಾನ
ಹಾರೈಸಲಿ ಸಮಷ್ಠಿಯ ಶುಭಕಾಮನ.!

ನಲುಮೆಯ ಸ್ನೇಹವೃಂದಕೆ ಸುನಮನ
ಯುಗಾದಿ ಶುಭಾಶಯಗಳ ಭಾವಗಾನ
ಗೆಲುವಾಗಲಿ ಹೊಸವರ್ಷದ ಬಾಳಯಾನ
ಮೊಳಗಲಿ ಸುಖ ಶಾಂತಿಯ ಸಂಕೀರ್ತನ.!

# ತಾಳಿಕೋಟಿ: ನೂತನ ಸಂಚಾರಿ ನ್ಯಾಯಾಲಯ ಉದ್ಘಾಟನೆ

ಉದಯರಶ್ಮಿ ನ್ಯೂಸ್



ತಾಳಿಕೋಟಿ: ಪ್ರತಿ ತಾಲೂಕುಗಳಲ್ಲಿ ನ್ಯಾಯಾಲಯ ಸ್ಥಾಪನೆಗೆ ನಿರ್ಧರಿಸಿದ್ದು ಅದರ ಭಾಗವಾಗಿ ತಾಳಿಕೋಟೆಯಲ್ಲಿ ನ್ಯಾಯಾಲಯ ಸ್ಥಾಪನೆಯಾಗುತ್ತಿದೆ. ಇಲ್ಲಿರುವ ಪ್ರಕರಣಗಳನ್ನು ಗಮನಿಸಿದರೆ ಪೂರ್ಣ ಪ್ರಮಾಣದ ನ್ಯಾಯಾಲಯದ ಅವಶ್ಯಕತೆ ಇದೆ. ಆದರೆ ಸದ್ಯ ವಾರದಲ್ಲಿ ಎರಡು ದಿನ ಕಲಾಪ ನಡೆಸಲು ಅನುಮತಿ ದೊರೆತಿದೆ ಎಂದು ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಮತ್ತು ವಿಜಯಪುರ ಜಿಲ್ಲೆಯ ಆಡಳಿತಾತ್ಮಕ ನ್ಯಾಯಮೂರ್ತಿ ಅಶೋಕ ಕಿಣಗಿ ಹೇಳಿದರು.

ತಾಳಿಕೋಟೆ ಪಟ್ಟಣದ ಹಳೆಯ ಪುರಸಭೆಯ ಆವರಣದಲ್ಲಿ ಜಿಲ್ಲಾ ನ್ಯಾಯಾಂಗ, ಲೋಕೋಪಯೋಗಿ ಇಲಾಖೆ ವಿಜಯಪುರ ಹಾಗೂ ಮುದ್ದೇಬಿಹಾಳ ನ್ಯಾಯವಾದಿಗಳ ಸಂಘದ ಸಂಯುಕ್ತಾಶ್ರಯದಲ್ಲಿ ನೂತನವಾಗಿ ಪ್ರಾರಂಭವಾದ ಸಿವಿಲ್ ಜಡ್ಜ್ ಮತ್ತು ಜೆ-ಎಂಎಫ್ಸಿ ನ್ಯಾಯಾಲಯ ಉದ್ಘಾಟನೆ ನೆರವೇರಿಸಿ ಶನಿವಾರ ಮಾತನಾಡಿದರು.

ಇಂಡಿ-ಮುದ್ದೇಬಿಹಾಳಕ್ಕೆ ಜಿಲ್ಲಾ ನ್ಯಾಯಾಲಯ ಪ್ರಾರಂಭಿಸಲು ಪ್ರಸ್ತಾವನೆ ಸಲ್ಲಿಕೆಯಾಗಿವೆ. ಅಲ್ಲದೇ ಪಟ್ಟಣದಲ್ಲಿ ನ್ಯಾಯಾಲಯದ ಸಮುಚ್ಛಯ ನಿರ್ಮಾಣಕ್ಕೆ 110 ವಿದ್ಯುತ್ ಸ್ಥಾವರದ ಹಿಂದಿನ 165/ಬಿ ನಿವೇಶನ ಮಂಜೂರಿಗೆ ಪ್ರಸ್ತಾವನೆ ಸಲ್ಲಿಸಿದೆ ಎಂದರು.

ಮುದ್ದೇಬಿಹಾಳ ವಕೀಲರ ಸಂಘದ ಅಧ್ಯಕ್ಷ ಶಶಿಕಾಂತ ಶಿ ಮಾಲಗತ್ತಿ ಪ್ರಾಸ್ತಾವಿಕವಾಗಿ ಮಾತನಾಡಿ, ನಾಗರಿಕರ ಬಹುದಿನ ಬೇಡಿಕೆಯಿದು, ಕಳೆದ ಏಳೆಂಟು ವರ್ಷಗಳಿಂದ ನ್ಯಾಯವಾದಿಗಳು ಪಟ್ಟಣದ ನಾಗರಿಕರು ನಿರಂತರ ಪ್ರಯತ್ನಕ್ಕೆ ಇಂದು ಫಲ ದೊರೆತಿದೆ. ದೂರದ ಪೀರಾಪುರದಿಂದ ಮುದ್ದೇಬಿಹಾಳಕ್ಕೆ ಬರಬೇಕಾಗಿತ್ತು. ಆ ಶ್ರಮ, ಸಮಯ ಉಳಿಯಲಿದೆ. ನ್ಯಾಯಾಲಯ ಇಲ್ಲಿದೆ ಎಂಬ ಕಾರಣಕ್ಕೆ ವ್ಯಾಜ್ಯಗಳ ಸಂಖ್ಯೆ ಹೆಚ್ಚಾಗಬಾರದು. ಹೆಚ್ಚಿನವು ಸ್ಥಳೀಯವಾಗಿ ರಾಜಿ ಸಂಧಾನದಲ್ಲಿಯೆ ಮುಗಿಯುವಂತಾಗಲಿ ಎಂಬ ಕಿವಿ ಮಾತು ಹೇಳಿದರು..

ವೇದಿಕೆಯಲ್ಲಿ ದಿವಾಣಿ ಹಾಗೂ ಜೆಎಂಎಫ್ಸಿ ನ್ಯಾಯಾಧೀಶ ಸಂಪತ್ತಕುಮಾರ ಬಳೋಲಗಿಡದ, ವಿಜಯಪುರ ಲೋಕೋಪಯೋಗಿ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರ ರಾಜು ಮುಜುಮದಾರ ಇದ್ದರು.

ಅಧ್ಯಕ್ಷತೆಯನ್ನು ವಹಿಸಿದ್ದ ವಿಜಯಪುರದ ಪ್ರಧಾನ ಮತ್ತು ಸತ್ರ ನ್ಯಾಯಾಧೀಶ ಶಿವಾಜಿ ನಲವಡೆ ಸ್ವಾಗತಿಸಿದರು. ಮುದ್ದೇಬಿಹಾಳ ಹಿರಿಯ ದಿವಾಣಿ ಹಾಗೂ ಜೆಎಂ-ಎಫ್ಸಿ ನ್ಯಾಯಾಧೀಶೆ ಲಕ್ಷ್ಮೀ ನಿಂಗಪ್ಪ ಗರಗ ವಂದಿಸಿದರು. ಸಾಹಿತಿಗಳಾದ ಅಶೋಕ ಹಂಚಲಿ ಮತ್ತು ಶ್ರೀಕಾಂತ ಪತ್ತಾರ ನಿರ್ವಹಿಸಿದರು

ಕಾರ್ಯಕ್ರಮದಲ್ಲಿ ನ್ಯಾಯವಾದಿಗಳ ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಬಿ.ಗೌಡರ, ಕಾರ್ಯಕಾರಿ ಸಮಿತಿ ಸದಸ್ಯರು, ಪಟ್ಟಣದ ಪ್ರಮುಖರಾದ ಬಿ.ಎಸ್.ಪಾಟೀಲ ಯಾಳಗಿ, ಎಂ.ಆರ್.ಕತ್ರಿ, ಎಂ.ಎಸ್.ಸರಶೆಟ್ಟಿ, ಪುರಸಭೆಯ ಸದಸ್ಯರು ಮೊದಲಾದವರಿದ್ದರು.

# ಬಡವರ ಸೇವೆಯೇ ದೇವರ ಪೂಜೆ :ಡಾ.ಚನ್ನವೀರ ಶ್ರೀ

ಉದಯರಶ್ಮಿ ನ್ಯೂಸ್

ಮುದ್ದೇಬಿಹಾಳ: ಬಡವರ ಸೇವೆ ದೇವರ ಪೂಜೆ. ಬಡವರಲ್ಲಿ ಮಾನವೀಯತೆ ಮತ್ತು ದೈವತ್ವದ ಸ್ವರೂಪವನ್ನು ಕಾಣುವವರು ನಿಜವಾದ ಮಾನವರಾಗುತ್ತಾರೆ ಎಂದು ಕುಂಟೋಜಿ ಸಂಸ್ಥಾನ ಹಿರೇಮಠದ ಪೀಠಾಧಿಪತಿ ಡಾ.ಚನ್ನವೀರ ಶಿವಾಚಾರ್ಯರು ನುಡಿದರು.

ಪಟ್ಟಣದ ಹುಡ್ಕೋ ಬಡಾವಣೆಯಲ್ಲಿ ಮನಿಯಾರ್ ಟ್ರಸ್ಟ್ ವತಿಯಿಂದ ಹಮ್ಮಿಕೊಳ್ಳಲಾಗಿದ್ದ, ರಂಜಾನ್ ಹಬ್ಬದ ದಿನಸಿ ಕಿಟ್ ವಿತರಣಾ ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿ ಅವರು ಮಾತನಾಡಿದರು.

ಬಡವರು ಹಬ್ಬ ಆಚರಿಸಿದ ನಂತರದಲ್ಲೇ ನಾನು ಹಬ್ಬ ಆಚರಿಸುವೆ ಎಂದು ಸಂಕಲ್ಪತೊಟ್ಟು ಅಂದಾಜು 24 ವರ್ಷಗಳಿಂದ ನಿರಂತರವಾಗಿ ರಂಜಾನ್ ಹಬ್ಬದ ದಿನಸಿ ಕಿಟ್ ವಿತರಣೆ ಮಾಡುತ್ತ, ಕಣ್ಣು ಕಳೆದುಕೊಂಡವರಿಗೆ ಉಚಿತವಾಗಿ ಶಸ್ತ್ರಚಿಕಿತ್ಸೆಯ ಸೇವೆ ನೀಡುವ ಮೂಲಕ, ಬಡವರ ಕಣ್ಣಲ್ಲಿ ತಮ್ಮ ತಂದೆ ತಾಯಿಗಳನ್ನು ಕಾಣುವ ಅಯ್ಯೂಬ ಮನಿಯಾರ ಅವರ ಸೇವೆ ನಿಜಕ್ಕೂ ಶ್ಲಾಘನೀಯ. ಮುಂಬರುವ ದಿನಗಳಲ್ಲಿ ಇನ್ನಷ್ಟು ಹೆಚ್ಚಿನ ಬಡವರ ಸೇವೆ ನೀಡುವ ಶಕ್ತಿ ಭಗವಂತ ಅವರಿಗೆ ನೀಡಲಿ ಎಂದು ಆಶೀರ್ವದಿಸಿದರು.

ಜಿಲ್ಲಾ ಪಂಚಾಯತ ಮಾಜಿ ಉಪಾಧ್ಯಕ್ಷ ಪ್ರಭುಗೌಡ ದೇಸಾಯಿ ಅವರು ಮಾತನಾಡಿ, ಯಾವುದೇ ಫಲಾಪೇಕ್ಷೆ ಇಲ್ಲದೇ ಮಾಡುವ ದಾನ ಭಗವಂತನಿಗೆ ಸಲ್ಲುತ್ತದೆ. ಮನಿಯಾರ ಅವರು ಈ ವರೆಗೂ ಯಾವುದೇ ಫಲಾಪೇಕ್ಷೆ ಬಯಸದೇ ನಿರಂತರ ದಾನ ಮಾಡುತ್ತ ಬಂದಿದ್ದಾರೆ. ಯಾವುದೇ ಜಾತಿ ಧರ್ಮ ಎನ್ನದೇ ಬಡತನದ ಬೇಗೆಯಿಂದ ಬೆಂದು ತಮ್ಮ ಕಣ್ಣುಗಳನ್ನು ಕಳೆದುಕೊಂಡು, ಶಸ್ತ್ರಚಿಕಿತ್ಸೆ ಮಾಡಿಸಲು ಹಣವಿಲ್ಲದೇ ಪರದಾಡುತ್ತಿರುವ ಬಹುತೇಕರಿಗೆ ಖುದ್ದು ತಾವೇ ಶ್ರಮಿಸಿ ಶಸ್ತ್ರ ಚಿಕಿತ್ಸೆ ಮಾಡಿಸುವ ಮೂಲಕ ಮಾನವೀಯತೆ ಮೆರೆಯುತ್ತಿದ್ದಾರೆ. ಇವರ ಸೇವಾ ಕೈಂಕರ್ಯ ಇನ್ನೂ ಹೆಚ್ಚು ನಡೆಯಲಿ ಎಂದರು.

ಸಮಾಜ ಸೇವಕ ಅಯ್ಯೂಬ ಮನಿಯಾರ ಮಾತನಾಡಿ, ಪ್ರತೀ ವರ್ಷದಂತೆ ಈ ವರ್ಷವೂ ಕಣ್ಣಿನ ಶಸ್ತ್ರಚಿಕಿತ್ಸೆಯನ್ನು ಹಮ್ಮಿಕೊಳ್ಳುವ ಎಲ್ಲ ತಯಾರಿಯನ್ನು ಮಾಡಿದ್ದೆವು. ಆದರೆ ಚುನಾವಣೆ ನೀತಿಸಂಹಿತೆ ಇರುವದರಿಂದ ಸ್ವಲ್ಪ ಅಡೆತಡೆಯಾಗಿದೆ. ಚುನಾವಣೆ ಮುಗಿದ ಬಳಿಕ ಈ ಸೇವೆಯನ್ನು ಮುಂದುವರೆಸುವೆ ಎಂದರು.

ಕಸಾಪ ನಿಕಟಪೂರ್ವ ಅಧ್ಯಕ್ಷ ಎಂ.ಬಿ.ನಾವದಗಿ, ಸಾಹಿತಿ ಲಾಲ್‌ಹುಸೇನ ಕಂದಗಲ್ಲ, ನ್ಯಾಯವಾದಿ ವಿ.ಎಸ್.ಸಾಲಿಮಠ, ಪುರಸಭೆ ಸದಸ್ಯೆ ಸಂಗಮ್ಮ ದೇವರಳ್ಳಿ, ಪೋಸ್ಟ್ ಮಾಸ್ಟರ್ ಮಹಾಬಳೇಶ್ವರ ಗಡೇದ ಮಾತನಾಡಿ, ದೇವರು ಬಹಳ ಜನರಿಗೆ ಸಾಕಷ್ಟು ಐಶ್ವರ್ಯ ಕೊಟ್ಟಿರುತ್ತಾನೆ. ಆದರೆ ಅವರಲ್ಲಿ ದಾನ ಮಾಡುವ ಗುಣ ಇರಲ್ಲ. ಮನಿಯಾರ ಅವರ ಈ ಸೇವೆಯಲ್ಲಿ ಅವರ ಧರ್ಮಪತ್ನಿ ಪರ್ವಿನ್ ಮನಿಯಾರ ಅವರ ಪಾತ್ರವೂ ಬಹಳ ಮಹತ್ವದ್ದು. ಈ ಕುಟುಂಬ ಇನ್ನೂ ಸಾಕಷ್ಟು ಬಡವರಿಗೆ ಸೇವೆ ನೀಡುವಂತಾಗಲಿ ಎಂದರು.



ಸಾನಿಧ್ಯ ವಹಿಸಿದ್ದ ಅಫ್ತಾಬ್ ಮೌಲಾನಾ ಆಶೀರ್ವಚನ ನೀಡಿದರು. ಮೌಲಾನಾ ಅಲ್ಲಾಭಕ್ಷ ಖಾಜಿ ಕುರಾನ್ ಪಠಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. 300 ಕ್ಕೂ ಹೆಚ್ಚು ಸೀರೆ ಒಳಗೊಂಡ ದಿನಸಿ ಕಿಟ್ ಜೊತೆಗೆ ಹಾಲು ಖರೀದಿಸಲೆಂದು ತಲಾ 100 ರೂಗಳನ್ನು ಬಡಕುಟುಂಬಗಳಿಗೆ ವಿತರಿಸಲಾಯಿತು.

ವೀರಶೈವ ಲಿಂಗಾಯತ ಸಮಾಜದ ಅಧ್ಯಕ್ಷ ಪ್ರಭುರಾಜ ಕಲ್ಬುರ್ಗಿ, ಡಾ.ವಿ.ಎಂ.ವಿರಾದಾರ, ಪಂಚಮಸಾಲಿ ಸಮಾಜದ ಅಧ್ಯಕ್ಷ ಅಮರೇಶ ಗೂಳಿ, ಐ.ಎಲ್. ಮಮದಾಪೂರ, ಮಹಮ್ಮದ ಸಾತಿಹಾಳ, ರಜಿಯಾಬೇಗಂ ಒಂಟಿ, ಗೀತಾ ಹುರಕಡ್ಲಿ, ಮುಖಂಡ ಲಾಡ್ಲೇಮಶಾಕ ನಾಯ್ಕೋಡಿ, ಅಫ್ತಾಬ ಮನಿಯಾರ, ಶೇಖ ಸೇರಿದಂತೆ ಮತ್ತಿತರರು ಇದ್ದರು. ಮುಜಾಹೀದ ನವಾಜಕಟ್ಟಿ ಪ್ರಾಸ್ತಾವಿಕವಾಗಿ ಮಾತನಾಡಿ, ಕಾರ್ಯಕ್ರಮ ನಿರ್ವಹಿಸಿದರು.

# ಮುದ್ದೇಬಿಹಾಳದಲ್ಲಿ ಮತದಾನ ಜಾಗೃತಿ ಜಾಥಾ

ಉದಯರಶ್ಮಿ ನ್ಯೂಸ್

ಮುದ್ದೇಬಿಹಾಳ: ಲೋಕಸಭಾ ಸಾರ್ವತ್ರಿಕ ಚುನಾವಣೆ ಹಿನ್ನೆಲೆ ಆರೋಗ್ಯ ಇಲಾಖೆಯ ವತಿಯಿಂದ ಮತದಾರರಲ್ಲಿ ಮತದಾನ ಜಾಗೃತಿ ಜಾಥಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ಮತದಾನ ನಮ್ಮ ಹಕ್ಕು, ಯಾವ ಭಯವಿಲ್ಲದೆ-ಮತದಾನ ಮಾಡೋಣ, 18ವರ್ಷ ಮೇಲ್ಪಟ್ಟವರು ಕಡ್ಡಾಯವಾಗಿ ಮತದಾನ ಮಾಡಿ ಎನ್ನುವ ಘೋಷಣೆಗಳೊಂದಿಗೆ




ಆರೋಗ್ಯ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿಗಳು ಹಾಗೂ ಆಶಾ ಕಾರ್ಯಕರ್ತೆಯರು ಇಲ್ಲಿನ ತಾಲೂಕ ಆರೋಗ್ಯ ಅಧಿಕಾರಿಗಳ ಕಾರ್ಯಾಲಯದಿಂದ ಮುಖ್ಯ ಬಜಾರ್ ನಲ್ಲಿರುವ ಗ್ರಾಮ ದೇವತೆ ದೇವಸ್ಥಾನ, ಬಸವೇಶ್ವರ ವೃತ್ತ, ಬಸ್ ನಿಲ್ದಾಣ, ಕಿತ್ತೂರು ರಾಣಿ ಚನ್ನಮ್ಮ ವೃತ್ತ, ಸಂಗೊಳ್ಳಿ ರಾಯಣ್ಣ ವೃತ್ತ, ಅಂಬೇಡ್ಕರ ವೃತ್ತ ಸೇರಿಂದತೆ ಪ್ರಮುಖ ಬೀದಿಗಳಲ್ಲಿ ಸಾಗಿ ಜಾಗೃತಿ ಮೂಡಿಸಲಾಯಿತು.

ಅಂಬೇಡ್ಕರ್ ವೃತದಲ್ಲಿ ಜಾಥಾ ಕಾರ್ಯಕ್ರಮವನ್ನು ಉದ್ದೇಶಿಸಿ ತಹಸೀಲ್ದಾರ್ ಬಸವರಾಜ ನಾಗರಾಳ ಮಾತನಾಡಿ, ಪ್ರಜಾಪ್ರಭುತ್ವದ ಆಧಾರ ಸ್ತಂಭ ಮತದಾನ. 18 ವರ್ಷ ಮೇಲ್ಪಟ್ಟ ಎಲ್ಲರು ತಪ್ಪದೆ ಮತ ಚಲಾಯಿಸಿ ಸಂವಿಧಾನ ಪ್ರಕಾರ ಪ್ರಜೆಗಳೇ ಪ್ರಭುಗಳು ಎಂದು ನಿರೂಪಿಸಬೇಕು ಎಂದರು.

ತಾಲೂಕ ಆರೋಗ್ಯ ಅಧಿಕಾರಿ ಡಾ.ಸತೀಶ ತಿವಾರಿ ಮಾತನಾಡಿ, ಯಾವುದೇ ಕಾರಣಕ್ಕೂ ಮತದಾನ ಮಾಡದೆ ಇರಕೂಡದು, ಪ್ರತಿಯೊಬ್ಬರು ಮತ ಚಲಾಯಿಸುವಂತೆ ಜಾಗೃತಿ ಮೂಡಿಸಿ, ಜನರ ಮನವೊಲಿಸುವಂತೆ ಕರೆ ನೀಡಿದರು.

ಅಭಿಯಾನದಲ್ಲಿ ಆರೋಗ್ಯ ಇಲಾಖೆಯ ಡಾ.ಪ್ರವೀಣ್ ಸುನಕಲ್ಲ, ಜೆಓಸಿಸಿ ಬ್ಯಾಂಕ್ ನಿರ್ದೇಶಕರಾದ ಆನಂದಗೌಡ ಬಿರಾದಾರ, ಅನುಸೂಯ ತೇರದಾಳ, ಐ.ಸಿ.ಮಾನಕರ, ಟಿ.ಎಚ್.ಲಮಾಣಿ, ಬಸಮ್ಮ ಸಾರವಾಡ, ಎಂ.ಎಂ. ಟಪಾಲ, ಯಲ್ಲಪ್ಪ ಛಲವಾದಿ, ಎಂ.ಎಸ್.ಗೌಡರ, ಎಸ್.ಸಿ.ರುದ್ರವಾಡಿ, ಸಂತೋಷ ನಾಗರಬೆಟ್ಟ, ಸಂತೋಷ ಅಂಗಡಗೇರಿ, ಪ್ರಶಿಭಾರಾಣಿ ಸೇರಿದಂತೆ ಆರೋಗ್ಯ ಇಲಾಖೆಯ ಸಿಬ್ಬಂದಿಗಳು ಹಾಗೂ ಆಶಾ ಮೆಂಟರ್, ಆಶಾ ಕಾರ್ಯಕರ್ತೆಯರು ಇದ್ದರು.

## ಕಲಕೇರಿಯಲ್ಲಿ ನಡೆದ ಜಿಪಂ ವ್ಯಾಪ್ತಿಯ ಸಭೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪ್ರೊ.ರಾಜು ಆಲಗೂರ ವಾಗ್ದಾಳಿ

# ದೇಶ ಕಟ್ಟಿದ್ದು ಕಾಂಗ್ರೆಸ್, ಪಕೋಡಾ ಮಾರಿಸುತ್ತಿರುವುದು ಬಿಜೆಪಿ

ಉದಯರಶ್ಮಿ ನ್ಯೂಸ್

ಕಲಕೇರಿ: ದೇವರ ಹಿಪ್ಪರಗಿ ಮತಕ್ಷೇತ್ರದ ಕಲಕೇರಿಯಲ್ಲಿ ಭಾನುವಾರ ನಡೆದ ಜಿಪಂ ವ್ಯಾಪ್ತಿಯ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಕಾಂಗ್ರೆಸ್ ಪಕ್ಷದ ವಿಜಯಪುರ ಲೋಕಸಭೆ ಅಭ್ಯರ್ಥಿ ಪ್ರೊ.ರಾಜು ಆಲಗೂರ, 'ದೇಶವನ್ನು ಬುಡದಿಂದ ಕಟ್ಟಿದ್ದು ಕಾಂಗ್ರೆಸ್ ಪಕ್ಷ ಆದರೆ ದೇಶವನ್ನು ಹಾಳುಗೆಡವಿ ಪಕೋಡ ಮಾರಲು ಹಚ್ಚಿದ್ದು ಮೋದಿಯವರ ಬಿಜೆಪಿ ಎಂದು ಹೇಳಿದರು.



ನೀವೆಲ್ಲ ಸೌಖ್ಯದಿಂದ ಇರಬೇಕಾದರೆ ಕಾಂಗ್ರೆಸ್ ಪಕ್ಷ ಕೇಂದ್ರದಲ್ಲಿ ಅಧಿಕಾರಕ್ಕೆ ಬರಬೇಕು. ಜನರ ಜೀವನ ಸುಧಾರಿಸಬೇಕಾದರೆ ನಮ್ಮ ಪಕ್ಷಕ್ಕೆ ಮತ ನೀಡಿ, ರಾಜ್ಯ ಸರಕಾರ ನೀಡಿದ್ದ ಭರವಸೆಗಳೆಲ್ಲ ಈಡೇರಿಸಿದೆ. ನಮಗೆ ಓಟು ಕೇಳಲು ನೈತಿಕತೆ ಇದೆ. ಬಿಜೆಪಿಯವರ ಸುಳ್ಳಿನ ಮಾತಗಳನ್ನು ನಂಬಬೇಡಿ. ರಮೇಶ ಜಿಗಜಿಣಗಿಯವರು ಮೂವತ್ತು ವರ್ಷ ಲೋಕಸಭೆ ಸದಸ್ಯರಾಗಿ ಏನು ಮಾಡಿದ್ದಾರೆ ಹೇಳಿ. ಹಾಗಾಗಿ ಇದು ಬದಲಾವಣೆಯ ಸಮಯ, ಅವರನ್ನು ಬದಲಿಸಿ, ನಮಗೆ ಬೆಂಬಲಿಸಿ ಎಂದು ವಿನಂತಿಸಿದರು.

ಮಾಜಿ ಶಾಸಕರಾದ ಶರಣಪ್ಪ ಸುಣಗಾರ ಮಾತನಾಡಿ ನುಡಿದಂತೆ ನಡೆದದ್ದು ಹಾಗೂ ಮುಂದೆಯೂ ನಡೆಯುವುದು ನಮ್ಮ ಕಾಂಗ್ರೆಸ್ ಪಕ್ಷವಾಗಿದ್ದು, ಜನರ ಜೀವನ ಸುಂದರವಾಗಲು ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿ ಎಂದರು.

ಮುಖಂಡರಾದ ಸುಭಾಶ ಛಾಯಾಗೋಳ, ಬಿ.ಎಸ್. ಪಾಟೀಲ ಯಾಳಗಿ, ಡಾ.ಪ್ರಭುಗೌಡ ಲಿಂಗದಳ್ಳಿ, ಆನಂದಗೌಡ ದೊಡ್ಡಮನಿ, ಗೌರಮ್ಮ ಮುತ್ತತ್ತಿ, ಲಲಿತಾ ದೊಡ್ಡಮನಿ, ಸರಿತಾ ನಾಯಕ, ರಮೀಜಾ ನದಾಫ್, ಬಶೀರ್‌ಸೇಠ ಬೇಪಾರಿ, ಬಾಳಾಸಾಹೇಬ ಪಾಟೀಲ, ಬಾಪುಗೌಡ ಪಾಟೀಲ, ಸಂಗನಗೌಡ ಪಾಟೀಲ, ಸಾಹೇಬಗೌಡ ಬಿರಾದಾರ, ಜಹಾಂಗೀರಬಾಶಾ ಸಿರಸಗಿ, ಪರಶುರಾಮ ದಿಂಡವಾರ, ರಮೇಶ ಗುಬ್ಬೇವಾಡ, ದಾವಲಸಾಬ ನಾಯ್ಕೋಡಿ, ದೇವೇಂದ್ರ ಜಂಬಗಿ, ಕಾಶೀನಾಥ ತಳವಾರ, ರವೀಂದ್ರ ಸುಧಾಕರ, ಶಿವರಾಯ ಮೋಪಗಾರ, ರಾಜಅಹ್ಮದ ಸಿರಸಗಿ, ದ್ಯಾವಪ್ಪ ನಡುವಿನಕೇರಿ ಸೇರಿದಂತೆ ಅನೇಕರಿದ್ದರು.

# ಹರ್ಷದ ಹೊನಲಾಗಿ ಬರಲಿ ಯುಗಾದಿಯ ಸಿರಿ

## ಭಾವರಶ್ಮಿ



– ಶೀತಲ್ ಹೆಗಡೆ
("ನಮ್ಮ ಕಥಾ ಅರಮನೆ" ಬರಹಗಾರರು)

ಉದಯರಶ್ಮಿ ದಿನಪತ್ರಿಕೆ

ಚೈತ್ರ ಶುದ್ಧ ಪಾಡ್ಯದಂದು ಆಚರಿಸುವ ಹಬ್ಬ ಈ ಯುಗಾದಿ. ಹಳೆಯ ಹಾಗೂ ಹೊಸ

ವರುಷವನ್ನ ಬೆಸೆಯುಣಟಿಜಜಜಿಟಿಜಜವ ಸೇತುವೆ. ಹಿಂದೂಗಳ ಪ್ರಕಾರ – ತಿಥಿ , ವಾರ , ನಕ್ಷತ್ರ, ಕರ್ಣ ಮತ್ತು ಯೋಗ ಎಂಬ ಪವಿತ್ರ ಐದು ಅಂಗಗಳಿಂದ ಕೂಡಿದ ಪಂಚಾಂಗದ ಪ್ರಕಾರ ಹೊಸ ವರ್ಷ . ಹಳೆಯದನೆಲ್ಲ ಮುಣಟಿಜಜ-ಜಿಟಿಜಜಟೆಕಟ್ಟಿ ಹೊಸತನವನ್ನ ಆದರದಿಂದ ಸ್ವಾಗತಿಸುವ ಹಬ್ಬ. ಮನುಷ್ಯನ ಜನನದಿಂದ ಅವನ ಕಾಲ ಪ್ರಾರಂಭವಾಗಿ ಮರಣಕ್ಕೆ ಶರಣಾಗಿ ಪುನಃ ಜನನ ವೆಂಬ ಕಾಲಚಕ್ರಕ್ಕೆ ಸಿಲುಕಿ ಜನ್ಮವೆತ್ತುವ ಹಾಗೆ ಎಲ್ಲಿಂದ ಪ್ರಾರಂಭವೋ ಅಲ್ಲಿಗೇ ಬಂದು ತಲುಪುವುದು.

ಈ ದಿನ ರಾಮನು ವಾಲಿಯನ್ನ ವಧಿಸಿದ ದಿನ , ಬ್ರಹ್ಮನು ವಿಶ್ವವನ್ನ ಸೃಷ್ಟಿಸಿದ ದಿನ, ರಾಮನ ಪಟ್ಟಾಭಿಷೇಕದ ದಿನ ಎಂತಲೂ ಹೇಳುತ್ತಾರೆ.

ಯುಗಾದಿಯನ್ನ 2 ಭಾಗವಾಗಿ ಪರಿಗಣಿಸಲಾಗಿದೆ ಸೂರ್ಯಮಾನ ಹಾಗೂ ಚಂದ್ರಮಾನ ಯುಗಾದಿ . ಇದನ್ನ ಸೂರ್ಯ ಚಂದ್ರರ ಚಲನೆಗೆ ಅನುಗುಣವಾಗಿ ಆಚರಿಸುವ ರೂಢಿಯಿದೆ.

ಹಬ್ಬ ಹಾಗೂ ಋತುಗಳ ನಡುವೆ ಅವಿನಾಭಾವ ಸಂಬಂಧವಿದೆ. ಯುಗಾದಿ ಅಂದ ತಕ್ಷಣ ನೆನಪಾಗುವದು ಕವಿ ಬೇಂದ್ರೆಯವರ

**"ಯುಗಯುಗಾದಿ ಕಳೆದರೂ
ಯುಗಾದಿ ಮರಳಿ ಬರುತಿದೆ
ಹೊಸವರುಷಕೆ ಹೊಸಹರುಷವ
ಹೊಸತು ಹೊಸತು ತರುತಿದೆ."**

ಎಷ್ಟೇ ಯುಗಗಳು ಕಳೆದರೂ ಪ್ರತೀ ವರುಷವೂ ನೂತನ ನವನವೀನ ರೀತಿಯ ಅನುಭವಗಳನ್ನು ಯುಗಾದಿ ನೀಡುತ್ತಿದೆ. ಋತುವಿನ ಬದಲಾವಣೆಯಿಂದ ಎಲ್ಲಡೆಯೂ ಹೊಸ ಚಿಗುರು ಹಚ್ಚಹಸಿರಿನ ಮರಗಳು ಹಸಿರಾದ ತರುಲತೆಗಳ ಮಧ್ಯೆ ಚಿಕ್ಕ ಚಿಕ್ಕ ಹೂಗಳು ಅವುಗಳ ಮಕರಂದ ಹೀರಲು ಕಾಯುಣಟಿಜಜಜಿಟಿಜಜತಿರುವ ದುಂಬಿಯ ಝೇಂಕಾರ ಕೇಳಲು ಕಿವಿಗಿಂಪು ಮನಸ್ಸಿಗೆ ಮುಣಟಿಜಜಜಿಟಿಜಜದನೀಡುವ ಪ್ರಕೃತಿಯನ್ನ ನೋಡಲು ಎರಡು ಕಣ್ಣು ಸಾಲದು. ಇತ್ತ ರೈತ ಬೆಳೆದ ಪೈರು ಸೊಕ್ಕಿನಿಂದ ಸೆಟೆದು ಗಾಳಿಗೆ ಲಯಬದ್ದವಾಗಿ ಬಳುಕುವಾಗ ಅವನಿಗೆಷ್ಟು ಹೆಮ್ಮೆ ಸಾರ್ಥಕತೆಯ ಭಾವ ಇರಬಹುದು! ಈ ಭೂಮಿಯಲ್ಲಿ ಯಾವ ಫಲದ ನಿರೀಕ್ಷೆಯಲ್ಲಿ ಹಗಲು ಇರುಳನ್ನದೇ ಬೆವರು ರಕ್ತ ಒಟ್ಟಿಗೆ ಸುರಿಸಿ ಅದರ ಫಲ ಈ ರೀತಿಯಲ್ಲಿ ಭೂ ತಾಯಿ ನೀಡುತ್ತಿರುವಾಗ ಅವನ ಸಂತೋಷಕ್ಕೆ ಪಾರವೇ ಇಲ್ಲ! ಕೆ. ಎಸ್ ನಿಸಾರ್ ಅಹಮ್ಮದ್ರವರು ಹೇಳಿರುವ ಸಾಲುಗಳು ನೆನಪಾಗುವದು ಖಂಡಿತ.

"ಬೆವರ ಹೀರಿ ಬೆಳೆದ ಪೈರು
ಕಣಕಣದಲಿ ಹೊನ್ನತೇರು
ಕಣಜ ತುಂಬಿ ತುಳುಕಿ ಹಿಗ್ಗಿ
ನಾಡಿಗೊದಗಿ ಬಂತು ಸುಗ್ಗಿ."

ಹೊಸವರ್ಷವನ್ನ ಬರಮಾಡಿಕೊಳ್ಳುವ ಸಂಭ್ರಮ ಮಾವಿನತೋರಣದೊಂದಿಗೆ ಪ್ರಾರಂಭವಾಡಲಾಗತ್ತೆ. ಆ ದಿನದಂದು ಬೆಳಗನಜಾವ ಎದ್ದು ಅಭ್ಯಂಜನ ಸ್ನಾನ ಮುಗಿಸಿ ದೇವರಿಗೆ ವಿಶೇಷ ಅಲಂಕಾರ ಮಾಡಿ



ಹೊಸ ವರ್ಷದ ಪಂಚಾಂಗವನ್ನ ದೇವರ ಮುಂದಿಟ್ಟು ಅದಕ್ಕೂ ಪೂಜೆ ಸಲ್ಲಿಸಿ ಅನೇಕ ರೀತಿಯ ಭಕ್ಷ್ಯಗಳನ್ನ ನೈವೇದ್ಯ ಮಾಡಿ ವಿಶೇಷವಾಗಿ ಪಂಚಾಂಗಟವನ್ನ ಮನೆಯಲ್ಲಿರುವ ಎಲ್ಲ ಸದಸ್ಯರ ಸಮ್ಮುಖದಲ್ಲಿ ಓದಿ ಇಡೀ ವರ್ಷದ ರಾಶಿ ಫಲವನ್ನ ಹಾಗೂ ಯಾವ ಯಾವ ವಸ್ತುಗಳ ವಹೀವಾಟು ಹೇಗೇಗೆ ಆಗುವದು ಎಂಬುದನ್ನ ಹೇಳುವ ಪದ್ಧತಿ ಕೆಲವು ಕಡೆ ಇದೆ. ಬೇವು-ಬೆಲ್ಲವನ್ನು ಸಮವಾಗಿ ಮಿಶ್ರಣ ಮಾಡಿ ತುಪ್ಪದಲ್ಲಿ ಹುರಿದು ಎಲ್ಲರೂ ಅದನ್ನು ಸವಿಯುಣಟಿ-ಜಜಜಿಟಿಜಜವ ರೂಢಿ ಇಂದಿಗೂ ಜೀವಂತವಿದೆ. ಬಾಳಿನಲ್ಲಿ ಕಷ್ಟ-ಸುಖ , ನೋವು- ನಲಿವು ಹೇಗೆ ಸಮನಾಗಿ ನಿಭಾಯಿಸಬೇಕು ಎನ್ನುವುದರ ಸಾಂಕೇತಿಕ ಅಭ್ಯಾಸ .

ಇಲ್ಲಿ ಮಾವಿನ ತೋರಣ ಹಾಗೂ ಬೇವು-ಬೆಲ್ಲದ ಮಿಶ್ರಣದ ಹಿಂದೆ ಆಯುರ್ವೇದಿಕ್ ಕಾರಣವೂ ಇದೆ. ಮಾವಿನ ಎಲೆಗಳಲ್ಲಿ ಕ್ರಿಮಿನಾಶಕ ಹಾಗೂ ವಾಯುವನ್ನ ಪರಿಶುದ್ಧಗೊಳಿಸುವ ಅಂಶ ಇದೆ. ಬೇವು ಅಧರಕ್ಕೆ ಕಹಿಯಾದರೆ ಉದರಕ್ಕೆ ಸಿಹಿ. ಬೆಲ್ಲ ದೇಹದ ಉಷ್ಣಾಂಶವನ್ನ ಕಾದಿಡಲು ಹಾಗೂ ಹೇರಳವಾದ ಕಬ್ಬಿಣಾಂಶವನ್ನು ಹೊಂದಿದೆ. ಹೀಗೆ ಸಿಹಿ-ಕಹಿಯು ಜೀವನದ ಪಥವನ್ನ ಹೇಗೆ ಸಮತೋಲನೆ ಮಾಡಿಕೊಂಡು

ಸಾಗಬೇಕು ಎಂಬ ಕಟುಸತ್ಯದ ಅರಿವಿಗೆ ನೆರವಾಗುವಂತಿದೆ.

ಕರ್ನಾಟಕ, ಆಂಧ್ರ, ತೆಲಂಗಾಣ ಪಂಜಾಬ ಗುಜರಾತ ಹಾಗೂ ಪುಣೆ ಮುಂತಾದ ಕಡೆಯಲ್ಲಿ ಆಚರಿಸುವ ಪದ್ಧತಿ ಇದೆ. ಯಾವುದೇ ಕ್ರಮದಲ್ಲಿ ಬದಲಾವಣೆಯಿರಲಿ ಬೇವು-ಬೆಲ್ಲ ವನ್ನ ಸ್ವೀಕರಿಸುವದು ಎಲ್ಲ ಪ್ರದೇಶಗಳಲ್ಲೂ ಇದೆ.

ಹಬ್ಬಕ್ಕೆ ತೆಂಗಿನ ಕಾಯಿ ಹೋಳಿಗೆ ಅಥವಾ ಬೇಳೆ ಹೋಳಿಗೆ ಮತ್ತು ಬೆಲ್ಲದ ಪಾನಕ ಮಾಡುವ ಪದ್ಧತಿ ಕರ್ನಾಟಕದಲ್ಲಾದರೆ , ಮಹಾರಾಷ್ಟ್ರದಲ್ಲಿ ಹೋಳಿಗೆಯನ್ನೇ ಮಾಡುತ್ತಿದ್ದು ಅದನ್ನ ಅವರು " ಪೂರಣ ಪೋಳಿ" ಅನ್ನುತ್ತಾರೆ. ಆಂಧ್ರ ಮತ್ತು ತೆಲಂಗಾಣದಲ್ಲಿ ಮಾವಿನಕಾಯಿಯನ್ನ ಬಳಸಿ ಖಾದ್ಯಗಳನ್ನ ತಯಾರಿಸುವ ಪರಿಪಾಠವಿದೆ.

ಮುಖ್ಯವಾಗಿ ಹಬ್ಬಗಳ ಉದ್ದೇಶ ಒಟ್ಟಾಗಿ ಎಲ್ಲರೂ ಒಂದೇ ಎಂಬ ಭಾವದಿಂದ ಅರಿತು ಕಲೆತು ಕೂಡಿ ಬಾಳುವ ಕಾರಣವಷ್ಟೇ. ಬದುಕಿನ ಶೈಲಿ ಬದಲಾಗುತ್ತಿರುವ ಕಾಲದಲ್ಲಿ ಈ ಹಬ್ಬ-ಹರಿದಿನಗಳು ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುತ್ತಿದೆ. ಬದುಕಿನ ಅರ್ಥವನ್ನು ಕಂಡುಕೊಳ್ಳಲು ಸಂಸ್ಕೃತಿ ಸಂಪ್ರದಾಯವನ್ನು ಜೀವಂತವಾಗಿಡಿಸಲು ಇವೆಲ್ಲದವುದರ ಸಾರವನ್ನು ತಿಳಿಸಲು




ಹಬ್ಬದ ಆಚರಣೆ ಬೇಕೇ ಬೇಕು.

**" ತೊಲಗಲಿ ದುಃಖ ತೊಲಗಲಿ ಮತ್ಸರ
ಪ್ರೇಮಕೆ ಮೀಸಲು ನವ ಸಂವತ್ಸರ!
ನಮ್ಮೆದೆಯಲ್ಲಿದೆ ಸುಖನಿಧಿ ಎಂದು
ಹೊಸ ಹೂಣಿಕೆಯನು ತೊಡಗಿಂದು!"**

ಬೇಂದ್ರೆಯವರ ಈ ಸಾಲುಗಳು ನೆನಪಾಗುವದು. ಮನುಷ್ಯ-ಮನುಷ್ಯನ ನಡುವಿನ ಸಂಬಂಧ ಮೊದಲಿನಷ್ಟು ಗಟ್ಟಿಯಾಗಿಲ್ಲ , ಅರ್ಥವಿಲ್ಲದ ಸ್ವಾರ್ಥಮನೋಭಾವ , ತಾನೇ ಎಂಬ ಅಹಂ ಕಣ ಕಣದಲ್ಲೂ ಕಾಣುತ್ತಿದೆ. ಸಂಬಂಧಗಳ ನಡುವೆ ಮತ್ಸರ , ಮೇಲು-ಕೀಳೆಂಬ ಭಾವದ ಅಡ್ಡಗೋಡೆ ಎದ್ದು ನಿಂತಿದೆ. ವಸಂತಗಳುರುಳಿ ಮೈಮನದ ಮೌಢ್ಯ – ಜಾಡ್ಯವನ್ನ ಮನಸಿನ ತಮವನ್ನ ಕಳೆದು ಹೊಸತನ ಹೊಸವಿಚಾರಗಳನ್ನ ಮೈಗೂಡಿಸಿಕೊಂಡು ಪರಸ್ಪರ ಅರಿವಿನ ದಾರಿಯಲ್ಲಿ ಮುಣಟಿ-ಜಜಜಿಟಿಜಜನ್ನಡೆಯಲು ಭರವಸೆಯ ಬೆಳಕಾಗಿ ಯುಗಾದಿ ಹಬ್ಬವನ್ನ ಆಚರಿಸುತ್ತೇವೆ. ಎಲ್ಲರ ಮನದಾಸೆಯು ನನಸಾಗಲಿ ನಮ್ಮ ಸಂಸ್ಕೃತಿ ಸಂಸ್ಕಾರವು ನಳಿ ನಳಿಸಲಿ ಎಂಬುದೇ ಹಾರೈಕೆ

ಸಮಸ್ತ ಕಥಾ ಅರಮನೆಯ ಬಳಗಕ್ಕೆ ಕವಿಮನಗಳಿಗೆ ಸಾಹಿತ್ಯ ಪ್ರೇಮಿಗಳಿಗೆ ಹಾಗೂ ಓದಿ ಪ್ರೋತ್ಸಾಹಿಸುವ ಎಲ್ಲ ಓದುಗರಿಗೆ ಹೊಸ ವರ್ಷದ ಹಾರ್ದಿಕ ಶುಭಾಶಯಗಳು

# ಚುನಾವಣೆ ಸಿಬ್ಬಂದಿಗೆ ಮೊದಲ ಹಂತದ ತರಬೇತಿ

**ಉದಯರಶ್ಮಿ ನ್ಯೂಸ್**



ಬಸವನಬಾಗೇವಾಡಿ: ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಸಾರ್ವತ್ರಿಕ ಲೋಕಸಭಾ ಚುನಾವಣೆಗೆ ನಿಯುಕ್ತಿಗೊಂಡಿರುವ ಮತಗಟ್ಟೆ ಅಧ್ಯಕ್ಷಾಧಿಕಾರಿಗಳಿಗೆ, ಮತಗಟ್ಟೆ ಅಧಿಕಾ–ರಿಗಳಿಗೆ ಭಾನುವಾರ ಮೊದಲ ಹಂತದ ತರಬೇತಿ ಆಯೋಜಿಸಲಾಗಿತ್ತು.

ಬೆಳಗ್ಗೆ ನಿಯುಕ್ತಿಗೊಂಡ ಪಿಆರ್ಓ, ಎ ಆರ್ಓ ಸಿಬ್ಬಂದಿಗಳು ಆಗಮಿಸಿ ಹಾಜರಾತಿಗೆ ಸಹಿ ಮಾಡಿದ ನಂತರ ತಮಗೆ ನಿಗದಿ ಪಡಿಸಿದ ಕೋಣೆಗಳಿಗೆ ತೆರಳಿ ಮಾಸ್ಟರ್ ಟ್ರೇನರ್ಗಳಿಂದ ಮತಗಟ್ಟೆ ಅಧ್ಯಕ್ಷಾಧಿಕಾರಿಗಳ ಮತ್ತು ಮತಗಟ್ಟೆ ಅಧಿಕಾರಿಗಳ ಕರ್ತವ್ಯಗಳು, ಚುನಾವಣಾ ಆಯೋಗ ನೀಡಿದ ಮಾಹಿತಿಗಳ ಕುರಿತು ತರಬೇತಿಯಲ್ಲಿ ಭಾಗವಹಿಸಿದರು. ತರಬೇತಿಯು 11 ಕೋಣೆಗಳಲ್ಲಿ ಆಯೋಜನೆ ಮಾಡಲಾಗಿತ್ತು. ತರಬೇತಿಯಲ್ಲಿ ಪಿ ಆರ್ಓ, ಎಆರ್ಓಗಳಿಗೆ ಬೆಳಗ್ಗೆ ಪ್ರೊಜೆಕ್ಟರ್ ಮೂಲಕ, ಮಧ್ಯಾನ್ಹ ವಿದ್ಯುನ್ಮಾನ ಮತಯಂತ್ರಗಳ ಪ್ರಾತ್ಯಕ್ಷಿಕತೆ ಮೂಲಕ ಮಾಸ್ಟರ್ ಟ್ರೇನರ್, ಸೆಕ್ಟರ್ ಅಧಿಕಾರಿಗಳು ತರಬೇತಿ ನೀಡಿದರು. ತರಬೇತಿ ಕೋಣೆಗಳಿಗೆ ಜಿಲ್ಲಾ ತರಬೇತಿ ನೋಡಲ್ ಅಧಿಕಾರಿ ಶಂಕರಗೌಡ ಸೋಮನಾಳ ಭೇಟಿ ನೀಡಿ ವೀಕ್ಷಿಸಿದರು.

ನ್ಯಾಯಸಮ್ಮತ, ಪಾರದರ್ಶಕ ಮತದಾನ ನಡೆಯುವಲ್ಲಿ ಚುನಾವಣೆಗೆ ನಿಯುಕ್ತಿಗೊಂಡ ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸಬೇಕು. ತರಬೇತಿಯಲ್ಲಿ ತಮಗೆ ಉಂಟಾಗುವ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬೇಕು. ಸಿಬ್ಬಂದಿಗಳು ಸೂಕ್ತವಾದ ತರಬೇತಿ ಪಡೆದುಕೊಂಡು ಈ ತಾಲೂಕಿನ ಹೆಸರನ್ನು ತರಬೇಕೆಂದು ಸಹಾಯಕ ಚುನಾವಣಾಧಿಕಾರಿ ಗಂಗಪ್ಪ ಎಂ. ಅವರು ಪ್ರತಿ ತರಬೇತಿ ಕೋಣೆಗೆ ಭೇಟಿ ನೀಡಿ ಸಿಬ್ಬಂದಿಗಳಿಗೆ ಹೇಳಿದರು.

ಪಿಆರ್ಓ, ಎಆರ್ಓ ಸೇರಿ ಒಟ್ಟು 737 ಸಿಬ್ಬಂದಿಗಳನ್ನು ನಿಯೋಜನೆ ಮಾಡಲಾಗಿದೆ. ಇದರಲ್ಲಿ 16 ಸಿಬ್ಬಂದಿ ಗೈರು ಉಳಿದುಕೊಂಡಿದ್ದರು. ಈ ಕುರಿತು ಜಿಲ್ಲಾಧಿಕಾರಿಗಳಿಗೆ ಮಾಹಿತಿ ನೀಡಲಾಗಿದೆ ಎಂದು ಸಹಾಯಕ ಚುನಾವಣಾಧಿಕಾರಿ ಗಂಗಪ್ಪ ಎಂ. ಅವರು ಮಾಹಿತಿ ನೀಡಿದರು.

ಬಸವನಬಾಗೇವಾಡಿ ತಹಸೀಲ್ದಾರ ವೈ.ಎಸ್.ಸೋಮನಕಟ್ಟಿ, ನಿಡಗುಂದಿ ತಹಸೀಲ್ದಾರ ನೀಲಪ್ರಭ, ಕೊಲ್ಹಾರ ತಹಸೀಲ್ದಾರ ಎಸ್.ಎಸ್. ನಾಯಕಲಮಠ, ಚುನಾವಣಾ ಶಿರಸ್ತೇದಾರ ಮಹೇಶ ಬಳಗಾನೂರ, ವಿಷಯ ನಿರ್ವಾಹಕ ಎಸ್.ಜಿ.ಇಂಗಳೆ, ಆಪರೇಟರ್ ಅನಿಲ ಅವಟಿ,ಕಂದಾಯ ಇಲಾಖೆಯ ಕಂದಾಯ ನಿರೀಕ್ಷಕರು, ಉಪತಹಸೀಲ್ದಾರರು, ಗ್ರಾಮಾಡಳಿತಾಧಿಕಾರಿಗಳು, ಗ್ರಾಮ ಸಹಾಯಕರು, 21 ಸೆಕ್ಟರ್ ಅಧಿಕಾ–ರಿಗಳು, 13 ಜನ ಮಾಸ್ಟರ್ ಟ್ರೇನರ್ ಇತರರು ಇದ್ದರು.

# ಆಲಮಟ್ಟಿಯತ್ತ ದೇವರ ಪಲ್ಲಕ್ಕಿಗಳ ಸಾಲು

**ಉದಯರಶ್ಮಿ ನ್ಯೂಸ್**



ಆಲಮಟ್ಟಿ: ಹಿಂದೂಗಳ ಹೊಸ ವರ್ಷ ಯುಗಾದಿ. ಹೀಗಾಗಿ ಯುಗಾದಿ ಅಮವಾಸ್ಯೆಯ ದಿನ ದೇವರುಗಳ ಪಲ್ಲಕ್ಕಿಗಳನ್ನು ಕೃಷ್ಣೆಯಲ್ಲಿ ಸ್ನಾನ ಮಾಡಿಸುವುದು ನೂರಾರು ವರ್ಷಗಳ ಸಂಪ್ರದಾಯ.

ಹೀಗಾಗಿ ಸೋಮವಾರ, ಬೆಳಿಗ್ಗೆಯಿಂದಲೇ ಅವಳಿ ಜಿಲ್ಲೆಯ ನಾನಾ ಕಡೆಯಿಂದ ನೂರಾರು ದೇವ, ದೇವತೆಗಳ ಪಲ್ಲಕ್ಕಿಗಳು ಆಲಮಟ್ಟಿಯತ್ತ ಬಂದವು.

ಕೆಲವರು ನಡೆದುಕೊಂಡೇ ಪಲ್ಲಕ್ಕಿಯನ್ನು ಹೊತ್ತು ತಂದರೆ, ಇನ್ನೂ ಕೆಲವರು ಟ್ರ್ಯಾಕ್ಟರ್, ಎತ್ತಿನ ಬಂಡಿ, ನಾನಾ ವಾಹನಗಳಲ್ಲಿ ಪಲ್ಲಕ್ಕಿಯನ್ನು ಹೊತ್ತು ತರುತ್ತಿರುವುದು ಕಂಡು ಬಂತು.

ನೂರಾರು ಪಲ್ಲಕ್ಕಿಗಳ ಸಮಾಗಮವೇ ಆಲಮಟ್ಟಿಯ ಕೃಷ್ಣಾ ತೀರದಲ್ಲಿ ಜರುಗಿತು.

ನದಿಯ ಎರಡೂ ದಂಡೆಯ ಮೇಲೆ, ಛತ್ರಿ, ಚಾಮರ, ಪಲ್ಲಕ್ಕಿಗಳ ಸಂಭ್ರಮ, ಕಳಸದ ಮೆರವಣಿಗೆ, ಡೊಳ್ಳು ಕುಣಿತ, ಶುಚಿಗೊಳಿಸಿ, ನಂತರ ಅಲಂಕರಿಸಿ ಪೂಜಿಸಿದರು. ಕೆಲವರು ಕಂಬಳಿ ಹಾಸಿ ಪಲ್ಲಕ್ಕಿಯನ್ನಿಟ್ಟು ಪೂಜೆ ಸಲ್ಲಿಸಿದರು.

ದೇವರು:

ಹನುಮಂತ, ಕರಿದೇವರು, ಪರಮಾನಂದ, ಅಂಬಾಭವಾನಿ, ರೇಣ–ಕಾ ದೇವಿ, ಲಕ್ಷ್ಮಿ, ಶಿವ, ಪಾರ್ವತಿ, ದುರ್ಗವ್ವ, ದ್ಯಾಮವ್ವ, ಶೆಟಗೆವ್ವಾ, ಸಿಹಿ ಪದಾರ್ಥ ತಯಾರಿಸಿ ನೇವೇದ್ಯೆ ತೋರಿಸಿ, ಪ್ರಸಾದ ಸ್ವೀಕರಿಸುವ ದೃಶ್ಯವೂ ಕಂಡು ಬಂತು. ಮಧ್ಯಾಹ್ನ ಪ್ರಖರ ಬಿಸಿಲಿನ ಮಧ್ಯೆಯೂ ಪಲ್ಲಕ್ಕಿಗಳ ದರ್ಶನ ರಾರಾಜಿಸುತ್ತಿತ್ತು. ನಂತರ ಬಹುತೇಕ ಪಲ್ಲಕ್ಕಿಗಳನ್ನು ಕೃಷ್ಣಾ ತೀರದ ಚಂದ್ರಮ್ಮಾ ದೇವಸ್ಥಾನದ ಆವರಣದೊಳಗೆ ಇಟ್ಟು ಅಲ್ಲಿಯೂ ಪೂಜೆ ಸಲ್ಲಿಸುತ್ತಿದ್ದ ದೃಶ್ಯ ಕಂಡು ಬಂತು.

> "ಇಂಗಳಗಿ ಗ್ರಾಮದಿಂದ ಅಮೋಘ ಸಿದ್ಧ ದೇವರ ಉತ್ಸವ ಮೂರ್ತಿ, ಪಲ್ಲಕ್ಕಿಯನ್ನು ಹೊತ್ತುಕೊಂಡು ನಡೆದುಕೊಂಡೇ 50 ಕ್ಕೂ ಅಧಿಕ ಜನ ಇಲ್ಲಿಗೆ ಬಂದಿದ್ದೇವೆ. ಕೃಷ್ಣೆಯಲ್ಲಿ ಸ್ನಾನ ಮಾಡಿಸಿ, ಮರಳಿ ಒಯ್ಯುತ್ತೇವೆ, ಈ ಸಂಪ್ರದಾಯ ನಮ್ಮ ಹಿರಿಯರಿಂದ ಬಂದಿದೆ."
>
> – ಮಾಳಪ್ಪ ಪೂಜಾರಿ, ಇಂಗಳಗಿ

# ಜೆಡಿಎಸ್ ಬಿಜೆಪಿಯಲ್ಲಿ ವಿಲೀನವಾಗಿಲ್ಲ, ಮೈತ್ರಿ ಮಾತ್ರ :ಶಾಸಕ ರಾಜುಗೌಡ

**ಉದಯರಶ್ಮಿ ನ್ಯೂಸ್**



ಬಸವನಬಾಗೇವಾಡಿ: ರಾಜ್ಯಕ್ಕೆ ಒಳ್ಳೆಯದು ಆಗಬೇಕು, ನೀರಾವರಿ ಯೋಜನೆ ಜಾರಿಯಾಗಬೇಕೆಂಬ ಸದುದ್ದೇಶದೊಂದಿಗೆ ಪಕ್ಷದ ವರಿಷ್ಠರು ಲೋಕಸಭೆ ಚುನಾವಣೆಯಲ್ಲಿ ರಾಜ್ಯದಲ್ಲಿ ಜೆಡಿಎಸ್ ಪಕ್ಷವನ್ನು ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡಿದ್ದಾರೆ ವಿನಃ ವಿಲೀನಗೊಳಿಸಿಲ್ಲ. ಮೇ. 7 ರಂದು ನಡೆಯಲಿರುವ ವಿಜಯಪುರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ, ಸಂಸದ ರಮೇಶ ಜಿಗಜಿಣಗಿ ಅವರನ್ನು ಬಹುಮತದೊಂದಿಗೆ ನಮ್ಮ ಕಾರ್ಯಕರ್ತರು ಆಯ್ಕೆ ಮಾಡಲು ಕಾರ್ಯತತ್ಪರಾಗಬೇಕೆಂದು ದೇವರಹಿಪ್ಪರಗಿ ಶಾಸಕ ರಾಜುಗೌಡ ಪಾಟೀಲ ಹೇಳಿದರು.

ತಾಲೂಕಿನ ಕುದರಿಸಾಲವಾಡಗಿ ಗ್ರಾಮದ ಮಾದೇಶ್ವರ ದೇವಸ್ಥಾನದ ಕಲ್ಯಾಣ ಮಂಟಪದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ದೇವರಹಿಪ್ಪರಗಿ ಮತಕ್ಷೇತ್ರದ ಜೆಡಿ–ಎಸ್ ಪಕ್ಷದ ಪದಾಧಿಕಾರಿಗಳ ಹಾಗೂ ಕಾರ್ಯಕರ್ತರ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ನಾನು ಪಕ್ಷದ ಸಿದ್ದಾಂತ ಮೊದಲಿನಿಂದಲೂ ಕಾರ್ಯನಿರ್ವಹಿಸುತ್ತಾ ಬಂದಿದ್ದೇನೆ. ಈ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯೊಂದಿಗೆ ಪಕ್ಷವು ಮೈತ್ರಿ ಮಾಡಿಕೊಂಡ ಹಿನ್ನೆಲೆಯಲ್ಲಿ ಪಕ್ಷದ ಕಾರ್ಯಕರ್ತರಿಗೆ ಈ ವಿಷಯ ತಿಳಿಸುವ ಉದ್ದೇಶದಿಂದ ಈ ಪೂರ್ವಭಾವಿ ಸಭೆ ಕರೆಯಲಾಗಿದೆ. ಮುಂಬರುವ ದಿನಗಳಲ್ಲಿ ಬಿಜೆಪಿ ಹಾಗೂ ಜೆಡಿಎಸ್ ಪಕ್ಷ ಜಂಟಿಯಾಗಿ ಸಭೆ ಆಯೋಜನೆ ಮಾಡಲಾಗುತ್ತದೆ ಎಂದರು.

ನಾನು ಎಲ್ಲ ಸಮಾಜ ಬಾಂಧವರೊಂದಿಗೆ ಭಾವನಾತ್ಮಕವಾದ ಸಂಬಂಧ ಹೊಂದಿದ್ದೇನೆ. ಕಳೆದ 15 ವರ್ಷಗಳಿಂದ ದೇವರಹಿಪ್ಪರಗಿ ಮತಕ್ಷೇತ್ರದ ಜನರು ನನ್ನೊಂದಿಗೆ ಇದ್ದಾರೆ. ಈ ಸಲ ವಿಧಾನಸಭೆ ಚುನಾವಣೆಯಲ್ಲಿ ಮತಕ್ಷೇತ್ರದ ಜನರ ಆಶೀರ್ವಾದದೊಂದಿಗೆ ಶಾಸಕನಾಗಿರುವೆ. ಕ್ಷೇತ್ರದ ಜನರ ಋಣ ನನ್ನ ಮೇಲಿದೆ. ಯಾವ ಸಮಾಜಕ್ಕೂ ಅನ್ಯಾಯ ಮಾಡದೇ ಕ್ಷೇತ್ರದ ಅಭಿವೃದ್ಧಿ ಸದಾ ಬದ್ಧ. ನಮ್ಮ ಕಾರ್ಯಕರ್ತರಿಗೆ ಅನ್ಯಾಯವಾಗದಂತೆ ನೋಡಿಕೊಳ್ಳುತ್ತೇನೆ. ನಾನು ಅಲ್ಪಸಂಖ್ಯಾತರ ಮತಗಳನ್ನು ಪಡೆದುಕೊಂಡು ಈಗ ಕೋಮುವಾದಿ ಪಕ್ಷಕ್ಕೆ ಬೆಂಬಲ ನೀಡುತ್ತಿದ್ದೇನೆ ಎಂದು ಕಾಂಗ್ರೆಸ್ ಮುಖಂಡರೊಬ್ಬರೂ ಹೇಳಿಕೆ ನೀಡಿರುವುದು ಸರಿಯಲ್ಲ. ನಾನು ಅಲ್ಪಸಂಖ್ಯಾತ ಸೇರಿದಂತೆ ಎಲ್ಲ ಸಮಾಜ ಬಾಂಧವರೊಂದಿಗೆ ಉತ್ತಮವಾದ ಸಂಬಂಧ ಇಟ್ಟುಕೊಂಡಿದ್ದೇನೆ. ಎಲ್ಲ ಸಮಾಜ ಬಾಂಧವರ ಮತಗಳನ್ನು ಪಡೆದುಕೊಂಡು ನಾನು ಶಾಸಕನಾಗಿ ಆಯ್ಕೆಯಾಗಿದ್ದೇನೆ ಎಂಬುವದನ್ನು ಅವರು ಅರಿತುಕೊಳ್ಳಬೇಕೆಂದರು.

ಮಾಜಿ ಶಾಸಕ ದೇವಾನಂದ ಚವ್ಹಾಣ ಮಾತನಾಡಿ, ಶಾಸಕ ರಾಜುಗೌಡ ಪಾಟೀಲ ಅವರು ಕ್ಷೇತ್ರದ ಅಭಿವೃದ್ಧಿಗೆ ಹಗಲಿರುಳು ಶ್ರಮಿಸುತ್ತಿದ್ದಾರೆ. ಎಲ್ಲರನ್ನು ಸಮಾಧಾನ ಮಾಡಲು ಯಾರಿಂದಲೂ ಸಾಧ್ಯವಿಲ್ಲ. ಶಾಸಕ ಅವರ ಹೆಸರು ಕೆಡಿಸಲು ವಿರೋಧ ಪಕ್ಷದವರು ಏನು ಹೇಳಿದರು ಅದನ್ನು ಗಮನಿಸಿದೇ ಲೋಕಸಭೆ ಚುನಾವಣೆಯಲ್ಲಿ ಎಲ್ಲ ಕಾರ್ಯಕರ್ತರು ಸಕ್ರಿಯವಾಗಿ ಭಾಗವಹಿಸಿ ಬಿಜೆಪಿ ಅಭ್ಯರ್ಥಿಯನ್ನು ಆಯ್ಕೆ ಮಾಡಬೇಕೆಂದ ಅವರು, ಬಿಜೆಪಿ ಪಕ್ಷವು ಉತ್ತರಕರ್ನಾಟಕದ ಭಾಗದಲ್ಲಿ ಒಂದು ಲೋಕಸಭಾ ಕ್ಷೇತ್ರಕ್ಕೆ ಜೆಡಿಎಸ್ ಪಕ್ಷಕ್ಕೆ ಒಂದು ಸ್ಥಾನ ನೀಡಬೇಕಾಗಿತ್ತು. ಇದರ ಬಗ್ಗೆ ನನಗೆ ಅಸಮಾಧಾನವಿದೆ ಎಂದರು.

ಜೆಡಿಎಸ್ ಪಕ್ಷದ ಜಿಲ್ಲಾಧ್ಯಕ್ಷ ಬಸನಗೌಡ ಮಾಡಗಿ ಮಾತನಾಡಿ, ವಿಜಯಪುರ ಲೋಕಸಭೆ ಕ್ಷೇತ್ರದಲ್ಲಿ ಜೆಡಿಎಸ್ ಪಕ್ಷದ ಅಭ್ಯರ್ಥಿಯಾದ ಸುನೀತಾ ಚವ್ಹಾಣ ಅವರಿಗೆ ಟಿಕೆಟ್ ನೀಡಬೇಕೆಂದು ಪಕ್ಷದ ವರಿಷ್ಠರಲ್ಲಿ ಮನವಿ ಮಾಡಿಕೊಳ್ಳಲಾಗಿತ್ತು. ಕೊನೆ ಗಳಿಗೆಯಲ್ಲಿ ಇದು ಕೈ ತಪ್ಪಿದೆ. ಈ ಕುರಿತು ಎಲ್ಲರಿಗೂ ನೋವಿದೆ. ಪಕ್ಷದ ಸಿದ್ದಾಂತಕ್ಕೆ ಎಲ್ಲರೂ ತಲೆಬಾಗಲೇಬೇಕು. ಹಿಂದಿನ ವಿಧಾನಸಭೆ ಚುನಾವಣೆಯಲ್ಲಿ ದೇವರಹಿಪ್ಪರಗಿ ಮತಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದೊಂದಿಗೆ ಮೈತ್ರಿ ಮಾಡಿಕೊಂಡು ಸುನೀತಾ ಚವ್ಹಾಣ ಅವರು ಸ್ಪರ್ಧೆ ಮಾಡಿದ್ದರು. ಆಗ ಕಾಂಗ್ರೆಸ್ ಪಕ್ಷದ ಕುತಂತ್ರದಿಂದ ಸುನೀತಾ ಚವ್ಹಾಣ ಅವರು ಪರಾಭವಗೊಳ್ಳಬೇಕಾಯಿತು. ಈ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ, ಜೆಡಿಎಸ್ ಪಕ್ಷದ ಮುಖಂಡರು, ಕಾರ್ಯಕರ್ತರು ಸಮನ್ವಯತೆಯಿಂದ ಕಾರ್ಯನಿರ್ವಹಿಸಬೇಕೆಂದರು.

ಜೆಡಿಎಸ್ ಪಕ್ಷದ ಜಿಲ್ಲಾ ಉಪಾಧ್ಯಕ್ಷ ರಿಯಾಜ ಎಲಿಗಾರ ಮಾತನಾಡಿ, ಬಿಜೆಪಿ ಪಕ್ಷವು ಇಡೀ ದೇಶದಲ್ಲಿ ಎಲ್ಲಿಯೂ ಒಂದು ಸ್ಥಾನವನ್ನು ಅಲ್ಪಸಂಖ್ಯಾತ ಮುಸ್ಲಿಂ ಬಾಂಧವರು ಟಿಕೆಟ್ ನೀಡಿಲ್ಲ. ಇದನ್ನು ಮುಸ್ಲಿಂ ಬಾಂಧವರು ಅರಿತುಕೊಳ್ಳಬೇಕಿದೆ. ಜೆಡಿಎಸ್ ಪಕ್ಷವು ಯಾವಾಗಲು ಅಲ್ಪಸಂಖ್ಯಾತರ ಪರವಿದೆ ಎಂದರು.

ಮಡುಸಾವುಕಾರ ಬಿರಾದಾರ, ಬಸನಗೌಡ ಬಿರಾದಾರ, ಬಾಬು ನದಾಫ, ಎ.ಡಿ.ಮುಲ್ಲಾ ಮಾತನಾಡಿದರು. ವೇದಿಕೆಯಲ್ಲಿ ಸಚೀನಗೌಡ ಪಾಟೀಲ, ವಿಶ್ವನಾಥ ನಾಡಗೌಡ, ಗುರುನಗೌಡ ಪಾಟೀಲ,ಅನಿಲ ಪಾಟೀಲ, ಪಾವಡೆಪ್ಪ ಹವಾಲ್ದಾರ, ಕೇಶು ರಾಠೋಡ, ಸಂಗಮೇಶ ಹಳ್ಳೂರ, ಕಾಶೀಂ ನಾಯ್ಕೋಡಿ ಇತರರು ಇದ್ದರು.

ಸಾಯಬಣ್ಣ ಬಾಗೇವಾಡಿ ಪ್ರಾಸ್ತವಿಕವಾಗಿ ಮಾತನಾಡಿದರು. ಬಸವರಾಜ ಬಾಗೇವಾಡಿ ನಿರೂಪಿಸಿ, ವಂದಿಸಿದರು.

# ಸಂಭ್ರಮದಿಂದ ಜರುಗಿದ ಕಳಸಾರೋಹಣ

**ಉದಯರಶ್ಮಿ ನ್ಯೂಸ್**



ಬಸವನಬಾಗೇವಾಡಿ: ತಾಲೂಕಿನ ಜಾಯವಾಡಗಿ ಗ್ರಾಮದ ಆರಾಧ್ಯದೈವ ಸೋಮನಾಥೇಶ್ವರ, ಶಿವಪ್ಪ ಮುತ್ಯಾರ ಜಾತ್ರಾಮಹೋತ್ಸವದಂಗವಾಗಿ ಸೋಮವಾರ ಜೀಣೋದ್ಧಾರಗೊಂಡ ದೇವಸ್ಥಾನಕ್ಕೆ ಕಳಸಾರೋಹಣ ಸಂಭ್ರಮ, ಸಡಗರದಿಂದ ಜರುಗಿತು.

ತಾಲೂಕಿನ ಕಾನ್ನಾಳ ಗ್ರಾಮದ ಸಜ್ಜನ ಬಂಧುಗಳಿಂದ ಹಾಗೂ ಗ್ರಾಮದ ಸದ್ಭಕ್ತರಿಂದ ದೇವಸ್ಥಾನದ ಕಳಸ ಹಾಗೂ ಜಾಯವಾಡಗಿ ಗ್ರಾಮದಿಂದ ಪಲ್ಲಕ್ಕಿ ಸಕಲ ವಾದ್ಯಮೇಳದೊಂದಿಗೆ ಮೆರವಣಿಗೆ ಮೂಲಕ ದೇವಸ್ಥಾನಕ್ಕೆ ಆಗಮಿಸಿದ ನಂತರ ಭಕ್ತರ ಜಯಘೋಷದೊಂದಿಗೆ ದೇವಸ್ಥಾನದ ಕಳಸಾರೋಹಣ ನೆರವೇರಿತು. ಭಕ್ತರಿಗೆ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು.

ಮೆರವಣಿಗೆಯಲ್ಲಿ ಸಂಗಪ್ಪ ಸಜ್ಜನ, ಶರಣಪ್ಪಮಾಸ್ತರ ಸಜ್ಜನ, ರಾಜಶೇಖರ ಸಜ್ಜನ, ಕುಮಾರ ನಾಗರೆಡ್ಡಿ, ಸಿದ್ದು ಹೂಗಾರ, ಚಂದ್ರಶೇಖರ ನಾಗರೆಡ್ಡಿ, ಮಂಜು ಈಳಗೇರ,ನೀಲಪ್ಪ ಮಂತ್ರಿ, ಸಿದ್ರಾಮ ಕಲ್ಲೂರ, ಚಂದಪ್ಪ ಕಾಮನಹಟ್ಟಿ, ರಾಜಶೇಖರ ಪಾಟೀಲ, ಮಹಾದೇವಪ್ಪಗೌಡ ಬಿರಾದಾರ, ಪರಶುರಾಮ ಪೂಜಾರಿ ಇತರರು ಇದ್ದರು. ರಾತ್ರಿ ಪಾಲಭಾವಿಯ ಬ್ರಹ್ಮಲಿಂಗೇಶ್ವರ ನಾಟ್ಯ ಸಂಘದಿಂದ ಯಾರ ವಿಶ್ವಾಸ ಯಾರಿಗೆ ಇಲ್ಲ ಎಂಬ ಸಾಮಾಜಿಕ ನಾಟಕ ಪ್ರದರ್ಶನಗೊಂಡಿತು.

ಇಂದು ರಥೋತ್ಸವಃ ಪ್ರತಿ ವರ್ಷ ಯುಗಾದಿ ಪಾಡ್ಯದಿನದಂದು ನಡೆಯುವ ಸೋಮನಾಥೇಶ್ವರ, ಶಿವಪ್ಪ ಮುತ್ಯಾರ ರಥೋತ್ಸವ ಏ.9 ರಂದು ನಡೆಯಲಿದೆ. ಬೆಳಗ್ಗೆ ತೇರಿನ ಶೃಂಗಾರ ನಂತರ ಬ್ಯಾಕೋಡ ಗ್ರಾಮಸ್ಥರಿಂದ ಬರುವ ಕಳಸ ಏರಿಸುವುದು. ಸೋಲವಾಡಗಿ ಗ್ರಾಮಸ್ಥರಿಂದ ರಥದ ಮಿಣಿ, ಅಗಸಬಾಳ ಗ್ರಾಮಸ್ಥರಿಂದ ರಥದ ಛತ್ರಿ ಚಾಮರ ಆಗಮನವಾದ ನಂತರ ಸಂಜೆ 5 ಗಂಟೆಗೆ ವಿವಿಧ ಶ್ರೀಗಳ ಸಾನಿಧ್ಯದಲ್ಲಿ ರಥೋತ್ಸವ ಜರುಗಲಿದೆ. ನಂತರ ವಿವಿಧ ಕಲಾವಿದರಿಂದ ರಸಮಂಜರಿ ಕಾರ್ಯಕ್ರಮ ಜರುಗಲಿದೆ ಎಂದು ಜಾತ್ರಾ ಉತ್ಸವ ಸಮಿತಿಯವರು ತಿಳಿಸಿದರು.

# ಇಂದು ಮಲ್ಲಿಕಾರ್ಜುನ ದೇವಸ್ಥಾನ ರಥೋತ್ಸವ

**ಉದಯರಶ್ಮಿ ನ್ಯೂಸ್**


ಬಸವನಬಾಗೇವಾಡಿ: ತಾಲೂಕಿನ ನಾಗೂರ ಗ್ರಾಮದ ಮಲ್ಲಿಕಾರ್ಜುನ ದೇವಸ್ಥಾನದ ಜಾತ್ರಾಮಹೋತ್ಸವದಂಗವಾಗಿ ಸೋಮವಾರ ಬೆಳಗ್ಗೆ ಮಲ್ಲಿಕಾರ್ಜುನ ದೇವರಿಗೆ ರುದ್ರಾಭಿಷೇಕ, ವಿಶೇಷ ಪೂಜೆ ನೆರವೇರಿತು. ಮೆರವಣಿಗೆ ಮೂಲಕ ದೇವಸ್ಥಾನದ ಕಳಸವನ್ನು ತರುವ ಮೂಲಕ ದೇವಸ್ಥಾನಕ್ಕೆ ಕಳಸವನ್ನು ಏರಿಸಲಾಯಿತು.

ರಥೋತ್ಸವಃ ಮಂಗಳವಾರ ಮಧ್ಯಾನ್ಹ ನಂದಿ ಕೋಲು ಹಾಗೂ ತೇರಿನ ಹಗ್ಗದ ಮೆರವಣಿಗೆ ನಡೆಯುವದು. ನಂತರ ಸಂಜೆ 5.30 ಗಂಟೆಗೆ ಮಲ್ಲಿಕಾರ್ಜುನ ದೇವರ ರಥೋತ್ಸವ ಭಕ್ತರ ಸಮ್ಮುಖದಲ್ಲಿ ನೆರವೇರಲಿದೆ. ರಾತ್ರಿ 10.30 ಗಂಟೆಗೆ ಕನ್ನಾಳದ ಸಿದ್ದರಾಮೇಶ್ವರ ನಾಟ್ಯ ಸಂಘದಿಂದ ಸಿದ್ದರಾಮೇಶ್ವರ ಮಹಿಮೆ ಎಂಬ ಪೌರಾಣಿಕ ನಾಟಕ ಪ್ರದರ್ಶನವಾಗಲಿದೆ ಎಂದು ಜಾತ್ರಾ ಕಮೀಟಿಯು ತಿಳಿಸಿದೆ.

# ಬೇವು ಬೆಲ್ಲದ ಸಂಭ್ರಮವೇ ಯುಗಾದಿ ಹಬ್ಬ

**ಉದಯರಶ್ಮಿ ನ್ಯೂಸ್**

ಚೈತ್ರ ಮಾಸದಲ್ಲಿ ಬರುವ ಮೊದಲ ಹಬ್ಬ ಯುಗಾದಿ, ಹಿಂದೂ ಸಂಪ್ರದಾಯದ ಹೊಸ ವರ್ಷ ಯುಗಾದಿ ಹಬ್ಬ. ಯುಗ ಯುಗಾದಿ ಕಳೆದರೂ ಯುಗಾದಿ ಮರಳಿ ಬರುತ್ತಿದೆ. ಹೊಸ ವರುಷಕ್ಕೆ ಹೊಸದು ಹೊಸದು ತರುತ್ತಿದೆ. ಈ



– ವಿ.ಎಂ.ಎಸ್.ಗೋಪಿ, ಬೆಂಗಳೂರು

ಯುಗಾದಿ ಹಬ್ಬ ನಮಗೆ ಮಾತ್ರವಲ್ಲ, ಪ್ರಕೃತಿಗೊ ಸಹ ಹೊಸ ವರುಷವಾಗಿರುತ್ತದೆ. ಚೈತ್ರ ಮಾಸದಿಂದ ಪ್ರಾರಂಭವಾಗುವ. ಈ ಮಾಸದಲ್ಲಿ ಮರ ಗಿಡಗಳು ಚಿಗರೊಡೆದು ಪ್ರಕೃತಿಯೂ ಅಚ್ಚ ಹಸಿರಿನಿಂದ ಕಂಗೊಳಿಸುತ್ತದೆ. ಬೇವು ಬೇಲ್ಲದ ಸಂಭ್ರಮವೇ ಈ ಯಗಾದಿ ಹಬ್ಬ ಮನೆಯಂಗಳದಲ್ಲಿ ಸಗಣಿ ಸಾರಿಸಿ ರಂಗೋಲಿ ಬಿಡಿಸಿ ಬಣ್ಣ ಮತ್ತು ಹೂವುಗಳಿಂದ ಅಲಂಕರಿಸಲಾಗುತ್ತದೆ. ಮನೆಯ ಹೊಸ್ತಿಲು ಮತ್ತು ದೇವರ ಕೋಣೆಯನ್ನು ಬೇವು ಮಾವಿನ ತಳಿರು ತೋರಣ ಮತ್ತು ಹೂವುಗಳಿಂದ ಅಲಂಕರಿಸುತ್ತಾರೆ. ಬೇವು ಬೇಲ್ಲವನ್ನು ತಿಂದು ಹಿಂದಿನ ನೋವು ಮರೆತು ಸ್ನೇಹಿತರಿಗೆ ಯುಗಾದಿ ಹಬ್ಬದ ಶುಭಾಷಯಗಳನ್ನು ಹೇಳಿ ಯುಗಾದಿ ಹಬ್ಬ ಆಚರಿಸಲಾಗುತ್ತದೆ. ಕಳೆದ ವರ್ಷದ ಕಹಿ ಘಟನೆಗಳನ್ನು ಮರೆಯೋಣ, ಮತ್ತು ಸಿಹಿ ಘಟನೆಗಳನ್ನು ಸವಿಯೋಣ, ಎನ್ನುವ ಸಂದೇಶವನ್ನು ಯುಗಾದಿ ಹಬ್ಬವು ಬೇವು ಬೆಲ್ಲ ಹಂಚುವುದು ಮೂಲ ಉದ್ದೇಶ ಜೀವನದಲ್ಲಿ ಕಷ್ಟ ಸುಖಗಳು ಬರುತ್ತಲೇ ಇರುತ್ತವೆ. ಕಷ್ಟ ಬಂದಾಗ ಕುಗ್ಗದೆ ಸುಖ ಬಂದಾಗ ಹಿಗ್ಗದೆ ಸಮಾನವಾಗಿ ತೆಗೆದುಕೊಂಡು ಬಾಳಬೇಕೆಂಬುವ ಸಂಕೇತವನ್ನು ಯುಗಾದಿ ಹಬ್ಬ ಆಚರಣೆಯಿಂದ




ತಿಳಿದುಕೊಳ್ಳಬಹುದಾಗಿದೆ. ಬೇವಿನ ಎಲೆ, ಹೂವು ಮತ್ತು ಬೆಲ್ಲದ ತುರಿ ಜೊತೆಗೆ ಸ್ವಲ್ಪ ತುಪ್ಪ ಹಾಕಿ ಕಲಿಸಿದ ಮಿಶ್ರಣವೇ ಬೇವು ಬೆಲ್ಲ ಮನೆಯಲ್ಲಿ ದೇವರಿಗೆ ಪೂಜೆ ಮಾಡಿ ಬೇವು ಬೆಲ್ಲ ಮನೆಯವರೆಲ್ಲ ತಿನ್ನುತ್ತಾರೆ. ಸಾಯಂಕಾಲ ಪಂಚಾಂಗ ಓದುವ ಕಾರ್ಯಕ್ರಮ ಮನೆಯ ಹಿರಿಯರು ಅಥವಾ ದೇವಸ್ಥಾನದ ಅರ್ಚಕರು ಪಂಚಾಂಗ ಓದುವುದನ್ನು ಎಲ್ಲಾರೂ ಕೇಳಿಸಿಕೊಳ್ಳುತ್ತಾರೆ. ಈ ಬೇವು ಬೇಲ್ಲದ ಸಂಭ್ರಮವೇ ಯುಗಾದಿ ಹಬ್ಬ.

# ಡ್ಯಾಂ ನಿರ್ಮಾಣಕ್ಕೆ ಕಮದಾಳ ಜನತೆಯ ತ್ಯಾಗ ದೊಡ್ಡದು :ನುಗ್ಗಲಿ



**ಉದಯರಶ್ಮಿ ನ್ಯೂಸ್**

ನಿಡಗುಂದಿ: ಆಲಮಟ್ಟಿಯ ಜಲಾಶಯದ ನಿರ್ಮಾಣಕ್ಕಾಗಿ ಮುಳುಗಡೆಯಾಗಿ ಮತ್ತೊಂದೆಡೆ ಬದುಕು ಕಟ್ಟಿಕೊಂಡಿರುವ ಕಮದಾಳ ಗ್ರಾಮದ ಜನರ ತ್ಯಾಗ ದೊಡ್ಡದು, ಮತ್ತೊಬ್ಬರ ಏಳಿಗೆಗಾಗಿ ನಿಮ್ಮ ಕಾರ್ಯ ಶ್ಲಾಘನೀಯ ಎಂದು ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ ನುಗ್ಗಲಿ ಅಭಿಪ್ರಾಯಪಟ್ಟರು.

ಪಟ್ಟಣದ ಹೊರವಲಯದ ಕಮದಾಳ ಮುದ್ದೇಶಪ್ರಭು ಜಾತ್ರೆಯ ನಿಮಿತ್ತ ಏರ್ಪಡಿಸಿದ್ದ "ಹೊಳಿಸಾಲಿನ ಹುಲಿ' ನಾಟಕ ಪ್ರದರ್ಶನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮುಳುಗಡೆಯಾಗಿ ಬೀಳಗಿ ತಾಲ್ಲೂಕಿನಿಂದ ಏಳು ಗ್ರಾಮದ ಜನರು ಒಂದೆಡೆ ನಿಡಗುಂದಿಯಲ್ಲಿ ನೆಲೆ ನಿಂತರೂ, ತಮ್ಮ ಸಂಪ್ರದಾಯವನ್ನು ಮರೆಯದ ಈ ಸಂತ್ರಸ್ತರ ಕಾರ್ಯ ಸ್ಮರಣೀಯ ಎಂದರು. ತಮ್ಮ ಭೂಮಿ, ಮನೆ, ಮನಸ್ಸುಗಳನ್ನು ಕಳೆದುಕೊಂಡಿರುವ ಸಂತ್ರಸ್ತರ ಆರ್ಥಿಕ ಏಳಿಗೆಗೆ ಸರ್ಕಾರ ಪ್ರತ್ಯೇಕ ಯೋಜನೆ ಜಾರಿಗೆ ತರಬೇಕಿದೆ ಎಂದು ಅವರು ಅಭಿಪ್ರಾಯಪಟ್ಟರು.

136 ಗ್ರಾಮಗಳು ಮುಳುಗಡೆಯಾಗಿ ಹೊಸ ಹೊಸ ಪುನರ್ವಸತಿಗಳು ನಿರ್ಮಾಣಗೊಂಡರೂ ಇಡೀ ಬದುಕನ್ನು ಕಟ್ಟಿಕೊಡಲು ಸಾಧ್ಯವಾಗಿಲ್ಲ. ಮತ್ತೆ ಮೊದಲಿನ ಗ್ರಾಮದ ಸಂಪ್ರದಾಯ ಬೆಳೆಯಲು ಒಂದು ಜನಾಂಗವೇ ಬದಲಾಗಬೇಕು ಎಂದರು.

ಸಾಮಾಜಿಕ ನಾಟಕ, ಜಾತ್ರೆಗಳಿಂದ ಭಕ್ತಿಯ ಭಾವ, ಸುಸಂಸ್ಕೃತ, ಗ್ರಾಮದ ಒಗ್ಗಟ್ಟು ಪ್ರದರ್ಶನಕ್ಕೆ ಕಾರಣವಾಗುತ್ತದೆ, ನಾಥ ಪಂಥದ ಪ್ರತಿಪಾದಕ ಮುದ್ದೇಶಪ್ರಭುಗಳ ಪವಾಡಗಳು ಕೂಡಾ ಅಪಾರ. ಸಂಸಾರದಲ್ಲಿದ್ದು ಪಾರಮಾರ್ಥ ಸಾಧನೆ ಮಾಡಿದ ಮಹಾನ್ ಪುರುಷ ಎಂದು ನುಗ್ಗಲಿ ಅಭಿಪ್ರಾಯಪಟ್ಟರು. ಯಾರೂ ನಮ್ಮ ಬದುಕನ್ನು ಕಟ್ಟಿಕೊಡಲು ಸಾಧ್ಯವಿಲ್ಲ, ನಿರುದ್ಯೋಗವನ್ನು ಮೆಟ್ಟಿ, ಚಿಕ್ಕ ಚಿಕ್ಕ ಬಂಡವಾಳದೊಂದಿ ಸ್ವಂತ ಉದ್ಯೋಗ ಮಾಡುವತ್ತ ಯುವಕರು ಚಿಂತನೆ ಮಾಡಬೇಕು, ಉತ್ತಮ ಶಿಕ್ಷಣ ಎಲ್ಲರೂ ಪಡೆಯಬೇಕು ಅಂದಾಗ ಮಾತ್ರ ನಾವು ಅತ್ಯುತ್ತಮ ಬದುಕು ಕಟ್ಟಿಕೊಳ್ಳಲು ಸಾಧ್ಯವಾಗುತ್ತದೆ ಎಂದರು.

ಸಂಭ್ರಮದ ರಥೋತ್ಸವ:

ಸಹಸ್ರಾರು ಜನರ ಭಕ್ತರ ಮಧ್ಯೆ ಮುದ್ದೇಶಪ್ರಭುಗಳ ರಥೋತ್ಸವವು ಸಂಭ್ರಮ,ಸಡಗರದಿಂದ ಜರುಗಿತು.

ಎಂ.ಎನ್ ಪುಜಾರಿ, ಮುದ್ದಪ್ಪ ಗೌಡರ, ವೀರಭದ್ರಯ್ಯ ಹಿರೇಮಠ, ರೇವಡಿ, ಮುಖಂಡರಾದ ಮುದ್ದಪ್ಪ ಯಳ್ಳಿಗತ್ತಿ, ಎಂ.ಕೆ. ಮುತ್ತಣ್ಣವರ, ಚನ್ನಬಸು ಚೆನ್ನಿಗಾವಿ, ರಾಜು ಮುಚ್ಚಂಡಿ, ಹನುಮಂತ ಬೇವಿನಕಟ್ಟಿ, ಆರ್.ಬಿ. ಗೌಡರ, ಯಮನಪ್ಪ ಈಳಗೇರ, ಮುತ್ತು ಸಾವಳಗಿ, ಹನುಮಂತ ಮಾಳಗೊಂಡ, ರಾಮನಗೌಡ ಹೊಸಗೌಡರ, ಕರಿಯಪ್ಪ ಸಿಂದಗಿ, ಬಸವರಾಜ ಮೇಟಿ, ರಾಮಣ್ಣ ಶಿರೂರ, ಸಲೀಂ ದಡೆದ, ಎಂ.ಎಂ. ಮುಲ್ಲಾ, ಅಶೋಕ ಗುಂಡಿನಮನಿ ಮತ್ತೀತರರು ಇದ್ದರು.

# ರಂಜಾನ ಹಬ್ಬದ ಆಚರಣೆ ಹಿನ್ನೆಲೆ :ಖರೀದಿ ಜೋರು

**ಉದಯರಶ್ಮಿ ನ್ಯೂಸ್**

– ಬಸವರಾಜ ನಂದಿಹಾಳ



ಬಸವನಬಾಗೇವಾಡಿ: ಪಟ್ಟಣ ಸೇರಿದಂತೆ ತಾಲೂಕಿನಲ್ಲಿ ಮುಸ್ಲಿಂ ಬಾಂಧವರು ರಂಜಾನ ಹಬ್ಬದ ಆಚರಣೆ ಮಾಡುವ ಹಿನ್ನೆಲೆಯಲ್ಲಿ ಸೋಮವಾರ ಮಾರುಕಟ್ಟೆಯಲ್ಲಿ ಮುಸ್ಲಿಂ ಬಾಂಧವರ ಖರೀದಿ ಭರಾಟೆ ಜೋರಾಗಿತ್ತು.

ಪಟ್ಟಣದಲ್ಲಿ ಬಹುತೇಕ ಕಿರಾಣಿ ಅಂಗಡಿಗಳ ಮುಂದೆ, ರಸ್ತೆ ಬದಿಯಲ್ಲಿ ಮಾರಾಟ ಮಾಡುತ್ತಿರುವ ಹಬ್ಬಕ್ಕೆ ಬೇಕಾದ ಅಗತ್ಯ ವಸ್ತುಗಳ ಖರೀದಿಯಲ್ಲಿ ನಿರತರಾಗಿದ್ದರು. ಪಟ್ಟಣದಲ್ಲಿರುವ ಬಟ್ಟೆ ಅಂಗಡಿ, ಕಿರಾಣಿ ಅಂಗಡಿ–ಮುಂಗಟ್ಟುಗಳಲ್ಲಿ ಹೆಚ್ಚಾಗಿ ಮುಸ್ಲಿಂ ಬಾಂಧವರು ಖರೀದಿಯಲ್ಲಿ ತೊಡಗಿರುವುದು ಕಂಡುಬರುತ್ತಿದೆ. ಮುಸ್ಲಿಂ ಬಾಂಧವರ ಖರೀದಿ ಭರಾಟೆ ಜೋರಾಗಿದೆ. ಸಂಪ್ರದಾಯದಂತೆ ಪವಿತ್ರ ರಂಜಾನ್ ಹಬ್ಬ ಇದಾಗಿರುವದರಿಂದಾಗಿ ಮುಸ್ಲಿಂ ಬಾಂಧವರು ಪ್ರತಿಯೊಬ್ಬರು ದಾನ, ಧರ್ಮ ಮಾಡುವುದರ ಜೊತೆಗೆ ಹೊಸ ಬಟ್ಟೆಗಳ ಖರೀದಿಗೆ ಮುಂದಾಗುವುದು ಸಹಜ. ಪಟ್ಟಣದ ಪ್ರಮುಖ ಅಂಗಡಿಗಳಲ್ಲಿ ಬಟ್ಟೆ ಖರೀದಿ ಹೆಚ್ಚಾಗಿರುವುದು ಕಂಡುಬಂದಿತ್ತು.

ಮಹಿಳೆಯರು, ಮಕ್ಕಳು, ಯುವಕರು ಹೆಚ್ಚಿನ ಪ್ರಮಾಣದಲ್ಲಿ ಖರೀದಿಯ ಮೊರೆ ಹೋಗುತ್ತಿದ್ದಾರೆ. ಇಂದು ಸಂತೆ ದಿನವಾಗಿರುವದರಿಂದ ತಾಲೂಕಿನ ಕೆಲವೆಡೆಗಳಿಂದ ಜನರು ಬಂದಿದ್ದರಿಂದಾಗಿ ಜನಸಂದಣಿ ಕಂಡುಬಂದಿತ್ತು. ವ್ಯಾಪಾರ ವಹಿವಾಟು ಜೋರಾಗಿ ನಡೆಯಿತು. ಮಹಿಳೆಯರು ತಮಗೆ ಬೇಕಾದ ಬಳೆ, ರಿಬ್ಬನ್ ಇತ್ಯಾದಿ ಖರೀದಿ ಮಾಡಿದರು. ಬಟ್ಟೆಗಳನ್ನು ಖರೀದಿಸುವ ಜೊತೆಗೆ ಚಪ್ಪಲಿ ಮತ್ತಿತರ ದಿನಬಳಕೆ ವಸ್ತುಗಳನ್ನು ಖರೀದಿಸುವದು ಸಾಮಾನ್ಯವಾಗಿತ್ತು. ರಂಜಾನ ಹಬ್ಬದಲ್ಲಿ ತಯಾರಿಸುವ ಸುರಕಮ್ ತಯಾರಿಸಲು ಬೇಕಾದ ಡ್ರೈಪುಡ್ಸ್ ,ಹಣ್ಣು ಖರೀದಿ ಭರಾಟೆಯು ಜೋರಾಗಿತ್ತು. ರಂಜಾನ್ ತಿಂಗಳಲ್ಲಿ ಮುಸ್ಲಿಂ ಬಾಂಧವರು ಒಂದು ತಿಂಗಳ ಕಾಲ ಉಪವಾಸ ಇದ್ದು. ಒಂದು ತಿಂಗಳ ಕಾಲ ಉಪವಾಸ ಬಿಡುವ ಪವಿತ್ರ ಹಬ್ಬ ಇದಾಗಿದೆ.

ನಮ್ಮ ಬಾಂಧವರಿಗೆ ರಂಜಾನ್ ಹಬ್ಬ ಬಹಳ ಪವಿತ್ರ ಹಬ್ಬವಾಗಿದೆ. ರಂಜಾನ್ ಹಬ್ಬದಂಗವಾಗಿ ಒಂದು ತಿಂಗಳ ಕಾಲ ರೋಜಾ ಮಾಡುವ ಮೂಲಕ ಭಗವಂತನಿಗೆ ಪ್ರಾರ್ಥನೆ ಸಲ್ಲಿಸುತ್ತೇವೆ. ರೋಜಾ ಕೊನೆಯ ದಿನ ರಂಜಾನ ಹಬ್ಬವನ್ನು ಆಚರಿಸುವ ಮೂಲಕ ಉಪವಾಸ ಮುಕ್ತಾಯಗೊಳಿಸಲಾಗುವುದು. ಸೌದಿ ಅರೇಬಿಯಾದಲ್ಲಿ ಬುಧವಾರ ರಂಜಾನ್ ಹಬ್ಬ ಆಚರಣೆಯಾಗುತ್ತಿದೆ. ನಾಳೆ ನಮ್ಮಲ್ಲಿ ಚಂದ್ರ ಕಂಡರೆ ಬುಧವಾರ ಎಲ್ಲೆಡೆ ರಂಜಾನ್ ಹಬ್ಬವನ್ನು ಸಂಭ್ರಮ, ಸಡಗರದಿಂದ ಆಚರಿಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ಒಂದು ವೇಳೆ ನಾಳೆ ಚಂದ್ರ ಕಾಣಿಸದಿದ್ದರೆ ಗುರುವಾರ ರಂಜಾನ ಹಬ್ಬದ ಆಚರಣೆಯಾಗುತ್ತದೆ ಎಂದು ದಸ್ತಗೀರ ವಜ್ಜಲ ಹೇಳಿದರು.

**Printed by:** AVINASH BIDARI, **Published and Onwed by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR